
# ಅಪರಂಜಿ

**ತಿಳಿನಗೆಯ ಕಾರಂಜಿ**

**ಅಕ್ಟೋಬರ್ 2019**

ವಿಶೇಷ ಸಂಚಿಕೆ

## ಹಗಲೇ ಎಲ್ಲಾ, ರಾತ್ರಿ ಇಲ್ಲ




ಬಿಡಿ ಪ್ರತಿ: ರೂ.10.00

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 37
ಸಂಚಿಕೆ - 1
ಅಕ್ಟೋಬರ್- 2019

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಮರೆಯಲಾಗದ ಆ ಮೂರು... | ವತ್ಸಲ | 8 |
| ಸೂರ್ಯ ಮುಳುಗದ ಲೋಕ | ಪ್ರಕಾಶ್ ಶೆಟ್ಟಿ | 9 |
| ಸಾಫ್ಟ್ ವೇರ್ ದಿನಚರಿ | ಶಂಸ ಐತಾಳ | 10 |
| ಹಗಲುಗನಸು | ಗಣೇಶ ಹೆಗಡೆ | 12 |
| ಇಸ್ಪೀಟಾಟಗಾರರ ಶುಕ್ರದೆಸೆ | ಶರತ್ ಕಲ್ಕೋಡ್ | 15 |
| ತುಂತುರು | ದಂಡಆ | 17 |
| ಹಗಲೇ ಹಗಲು | ಬೇಲೂರು ರಾಮಮೂರ್ತಿ | 18 |
| ಕತ್ತಲಿನಲ್ಲಿ ಉತ್ತರಗಳು | ಆನಂದ | 19 |
| ನಿದ್ದೆ ಕುಲಗೆಟ್ಟು... | ಗಾಯತ್ರಿ ಮೂರ್ತಿ | 21 |
| ಬಳುಕುವ ಬಳ್ಳಿಗಳಾಗಿ... | ಅನಿತಾ ನರೇಶ್ ಮಂಚಿ | 24 |
| ಎಡಿಸನ್... | ಪ್ರಕಾಶ್ ಆರ್. | 25 |
| ಚುಟುಕುಗಳು | ನಂ ನಾಗ್ರಾಜ್ | 26 |
| ಕತ್ತಲಿಲ್ಲದ ಪದಬಂಧ | ರಾಮನಾಥ್ | 27 |
| ಕಾಲವಾದ ಕಾಲ | ಪಾಲಹಳ್ಳಿ ವಿಶ್ವನಾಥ್ | 28 |
| ಇರುತ್ತಿರಲಿಲ್ಲ ಸಂಡೇ ಮಂಡೇ | ತುರುವೇಕೆರೆ ಪ್ರಸಾದ್ | 30 |
| ರಾತ್ರಿಗಳಿಲ್ಲದ ದಿನಗಳೇ | ಸಿ.ಆರ್. ಸತ್ಯ | 31 |
| ದಿನಪೂರ್ತಿ ಹಗಲೇ | ಸಹನಾ ಪ್ರಸಾದ್ | 35 |
| ಇದು ಬರಿ ಬೆಳಗಲ್ಲೋ ಅಣ್ಣ | ಈಶ್ವರ ಚಂದ್ರ | 36 |
| ನೊ ಕವರ್ ಆಫ್ ಡಾರ್ಕ್‌ನೆಸ್ | ಡಾ. ಶ್ಯಾಮಲಾ ರವಿಶಂಕರ್ | 38 |
| ಇರುಳುಗನಸು, ... | ಕೃಷ್ಣ ಸುಬ್ಬರಾವ್ | 39 |


**ಮುಖಪುಟ ವ್ಯಂಗ್ಯಚಿತ್ರ : ಚಂದ್ರನಾಥ್ ಆಚಾರ್ಯ**

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. *ಸಂಪರ್ಕ* : email: koravanjiaparanji@gmail.com ದೂ: 9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



''ದಿನ ಪೂರ್ತಿ ಹಗಲೇ ಇದ್ದಿದ್ದರೆ'' ಎಂಬ ವಿಷಯದ ಬಗ್ಗೆ ನಮ್ಮ ಎಸ್ಕಿಮೋ ಸ್ನೇಹಿತನೊಬ್ಬನಿಗೆ ಹೇಳಿದಾಗ ''ದಿನ ಪೂರ್ತಿ ಏಕೆ, ನಮ್ಮ ಊರಿನಲ್ಲಿ ಆರು ತಿಂಗಳುಗಳ ಕಾಲ ಬರೀ ಹಗಲೇ'' ಎಂದು ಹೇಳಿ ನಕ್ಕನಂತೆ!!

★★★

ಚಂದ್ರಗ್ರಹದಲ್ಲಿ ಮುಂಬರುವ ಹದಿನಾಲ್ಕು ದಿನಗಳ ನಿತ್ಯ ಹಗಲಿನಲ್ಲಾದರೂ
ನಮ್ಮ ಚಂದ್ರಯಾನದ ವಿಕ್ರಮ

ಚೇತರಿಸಿಕೊಳ್ಳಲೆಂದು ಅಪರಂಜಿಯ ಹಾರೈಕೆ!!

★★★

ದಿನವೆಲ್ಲಾ ಹಗಲೇ ಆಗಿದ್ದಾಗ ಕ್ಲಬ್ ಭಕ್ತರೆಲ್ಲಾ ಹ್ಯಾಪಿ ಅವರ್ ಇಲ್ಲವಲ್ಲಾ ಅಂತ ಪೇಚಾಡಿಕೊಂಡರಂತೆ!!!

ರಾತ್ರಿ ಪೊಲೀಸರಂತೂ ಕಕ್ಕಾಬಿಕ್ಕಿಯಾಗಿ ಬಿಟ್ಟಿದ್ದಾರಂತೆ!!

★★★

ಅಪರಂಜಿ ಪದಕಗಳಿಸಿದ ಸಿಂಧು

ಅವರಿಗೆ 'ಅಪರಂಜಿ'ಯ ಶುಭಾಶಯಗಳು!!

★★★

ಪಾಲಿಶ್ ನೆಪ; ಮಾಂಗಲ್ಯ ಕಳವು – ಸುದ್ದಿ

'ಪಾಲಿಶ್' ಆದಹಾಗಾಯಿತಲ್ಲ!!

★★★

''ಸ್ವವಿವರ ಸಲ್ಲಿಸಿ''; ರೋಮಿಲಾ ಥಾಪರ್‌ಗೆ ಜೆ.ಎನ್.ಯು. ಸೂಚನೆ –ಪತ್ರಿಕೆ

ನೆಹರು ಬೆಚ್ಚಿದರಂತೆ!!

★★★

''ಜಿ.ಡಿ.ಪಿ. ಕುಸಿತ; ಆತಂಕ ಬೇಡ'' –ಹೇಳಿಕೆ

ಇಂತಹ ಹೇಳಿಕೆಗಳಿಂದಲೇ ಆತಂಕ!!

★★★

ಐದು ಸಾವಿರ ಎಕರೆ ಅಕ್ರಮ ಮಂಜೂರು – ಸುದ್ದಿ

ಇನ್ನು ಸಕ್ರಮವಾದ ಸುದ್ದಿಗೆ ಕಾಯಬೇಕು!!

★★★

ಅನರ್ಹ ಶಾಸಕರ ಅರ್ಜಿ ವಿಚಾರಣೆ; 'ಆತುರ ಏಕೆ?' – ಸುಪ್ರೀಂ ಪ್ರಶ್ನೆ

ದೇಶ ಸೇವೆ ಮಾಡಲು ತೀವ್ರ ಹಂಬಲ ಇರಬಹುದು!!

★★★

ಭಾರತೀಯ ಪ್ಲಂಬಿಂಗ್ ಸಮ್ಮೇಳನ – ಪತ್ರಿಕೆ

ಚರ್ಚೆಗಳು ರಭಸವಾಗಿ ಹರಿಯಲಿ!!


★★★

# ನಮ್ಮ ನಿಮ್ಮಲ್ಲಿ

● ಶಿವಕುಮಾರ್

ಸ್ವಾಗತ, ಸುಸ್ವಾಗತ. ಈ ತಿಂಗಳ ವಿಶೇಷ ಸಂಚಿಕೆಗೆ ಆದರದ ಸ್ವಾಗತ. ನಿಮ್ಮ ತರ್ಕ, ವಿವೇಕ, ವೈಜ್ಞಾನಿಕ ಮನೋಧರ್ಮ ಇವುಗಳಿಗೆಲ್ಲಾ ಸ್ವಲ್ಪ ಬಿಡುವು ನೀಡಿ, ಸ್ವಚ್ಛಂದ ಮನಸ್ಸಿನಿಂದ ಇಲ್ಲಿನ ಲೇಖನಗಳಲ್ಲಿ ವಿಹರಿಸಿ. ಈ ಸಂಚಿಕೆಯ ಥೀಮ್

''ಹಗಲೇ ಎಲ್ಲಾ. ರಾತ್ರಿ ಇಲ್ಲ.'' ರಾತ್ರಿ ಹಗಲು ಭೇದವಿಲ್ಲದೇ ಸದಾ ಹಗಲಾಗಿರುವ ಜಗತ್ತಿನಲ್ಲಿ ಜ್ಯೋತಿಷಿಗಳ ಪಾಡನ್ನು ಮುಖಪುಟದ ವ್ಯಂಗ್ಯ ಚಿತ್ರದಲ್ಲಿ ನೋಡಿ. ಅಸಂಬದ್ಧ ಚಿಂತನೆ ಅಥವಾ ಲ್ಯಾಟರಲ್ ಥಿಂಕಿಂಗ್, ಸೃಜನಶೀಲತೆಯ ಒಂದು ಅವಿಭಾಜ್ಯ ಅಂಗ. ಭೂದೇವಿ ಮುನಿಸಿಕೊಂಡು ಅಪ್ಪಾಲೆ ತಿಪ್ಪಾಲೆ ತಿರುಗುವುದನ್ನು ನಿಲ್ಲಿಸಿದರೆ ಮಾತ್ರ ಸದಾಕಾಲ ಹಗಲೇ ಆಗಲು ಸಾಧ್ಯ ಎಂದು ವಿಜ್ಞಾನಿ ಹೇಳುತ್ತಾನೆ. ತಾರ್ಕಿಕ ಜಗತ್ತಿನಲ್ಲಿ ಅವನ ನೆಲೆ. ನಮ್ಮ ಈ ಸಂಚಿಕೆಯ ತರ್ಕರಹಿತ ಅಸಂಬದ್ಧ ಜಗತ್ತಿನಲ್ಲಿ, ಸೂರ್ಯನ ಚಲನೆ ನಮ್ಮ ಲೇಖಕರಿಗೆ ಮುಖ್ಯ ಅಲ್ಲ. ಅದರಿಂದ ಮನುಷ್ಯರ ಪಾಡೇನು? ಎಂಬ ಪ್ರಶ್ನೆಗೆ ಉತ್ತರದ ಹುಡುಕಾಟ ಇವರದ್ದು. ಕಿಡಿಯ ಪ್ರಕಾಶ್ ಎಸ್ಕಿಮೋಗಳ ಬಗ್ಗೆ ಚಿಂತಿಸಿದರೆ, ಶರಲೇಖ ನೇರವಾಗಿ ಹಿರಣ್ಯಗರ್ಭನ ಬಳಿ ಸಾಗುತ್ತಾನೆ. ಪ್ರಕಾಶ್ ಶೆಟ್ಟಿಯವರಿಗೆ ವಿದ್ಯುತ್ ಬಿಲ್ ಕಡಿತ ಸಂತಸ ನೀಡುತ್ತದೆ. ಇನಿಯನೊಂದಿಗೆ ಪ್ರೇಮ ಸಲ್ಲಾಪ ಕತ್ತಲೆಯ ಮರೆಯಲ್ಲಿ ಇನ್ನು ಆಗದಲ್ಲಾ ಎಂಬುದು ಸಹನಾ ಅವರ ಪೇಚಾಟ. ಗಣೇಶ ಹೆಗ್ಗಡೆ ಯವರಂತೂ ನೇರವಾಗಿ ನಮ್ಮ ಉಪಸಂಪಾದಕರ ಸ್ಥಾನಕ್ಕೇ ಏರಲು ಸನ್ನಾಹ ನಡೆಸಿದ್ದಾರೆ. ಶರತ್ ಕಲ್ಕೋಡ್ ಅವರ ಇಸ್ಪೀಟಿನ ಪ್ರೇಮ, ದನಂಆ ರವರ ಗಹನವಾದ ಹೇಳಿಕೆಗಳು, ತಮ್ಮ ನಿದ್ರೆಯ ಬಗ್ಗೆ ಆತಂಕ ಪಡುವ ಗಾಯತ್ರಿಯವರ ಬರಹ, ಚಿಂತನೆಗೆ ಹಚ್ಚುವ ಅನಿತಾ ಅವರ ಹೊಸ ಸಾಧ್ಯತೆಗಳು, ಇವೆಲ್ಲಾ ನಿಮ್ಮ ಮನ ರಂಜನೆಗೆ ಸಿದ್ಧವಾಗಿ ನಿಂತಿವೆ. ಅಜ್ಜ ಮೊಮ್ಮಗರ ನಡುವಣ ಸಂವಾದ ಪಾಲಹಳ್ಳಿಯವರ ಕೊಡುಗೆಯಾದರೆ, ತುರುವೇಕೆರೆ ಪ್ರಸಾದ್ ಅವರನ್ನು ಈ ವಿಚಿತ್ರ ಪರಿಸ್ಥಿತಿ ಕವನ ರಚನೆಗೆ ನೂಕಿದೆ. ಸತ್ಯರವರಂತೂ ಬೇರೆ ಬೇರೆ ಸಂಘ ಸಂಸ್ಥೆಗಳ ನೇತಾರರ ಪ್ರತಿಕ್ರಿಯೆಗಳನ್ನು ದಾಖಲಿಸಿದ್ದಾರೆ. ಈಶ್ವರ ಚಂದ್ರ ಮತ್ತು ಶ್ಯಾಮಲಾ ಮತ್ತು ಇತರ ಅನೇಕ ಬರಹಗಾರರು, ಚಿತ್ರಕಾರರ ಟೇಕ್ ಅನ್ನು ಓದಿಯೇ ಸವಿಯಬೇಕು.




ಒಟ್ಟಿನಲ್ಲಿ ಈ ಹೊಸ ಪ್ರಯೋಗ ನಮಗಂತೂ ಬಹು ಖುಷಿ ಕೊಟ್ಟಿತು. ನೀವೂ ಅವನ್ನು ಓದಿ ನಮ್ಮ ಸಂತಸದಲ್ಲಿ ಭಾಗಿಯಾಗಿರೆಂದು ಸವಿನಯ ವಿನಂತಿ.

# ಮರೆಯಲಾಗದ ಆ ಮೂರು ದಿನಗಳು!

**ವತ್ಸನ**

ಸಂಜೆ ಆರು ಗಂಟೆಯ ಸಮಯ. ಶರಲೇಖ ಮತ್ತು ನಾನು ಟಿ.ವಿ. ಮುಂದೆ ಕುಳಿತಿದ್ದೆವು. ಧರ್ಮಶಾಲಾದಲ್ಲಿ ಇಂಡಿಯಾ ಮತ್ತು ಸೌತ್ ಆಫ್ರಿಕಾಗಳ ನಡುವೆ ಮೊದಲ ಟ್ವೆಂಟಿ ಟ್ವೆಂಟಿ ಮ್ಯಾಚ್ ಏಳು ಘಂಟೆಗೆ ಪ್ರಾರಂಭವಾಗುವ ಸೂಚನೆಗಳು ಏನೇನೂ ಕಾಣುತ್ತಿರಲಿಲ್ಲ. ಮಳೆ ಇನ್ನೂ ಧಾರಾಕಾರವಾಗಿ ಸುರಿಯುತ್ತಿತ್ತು. ನಾನು ಟೀ ಮಾಡಿಕೊಂಡು ಬರಲು ಅಡಿಗೆ ಮನೆಯ ಕಡೆಗೆ ಹೊರಟೆ. ''ಬರ್ತಾ ಆ ಪ್ಲಾಸ್ಟಿಕ್ ಡಬ್ಬೀಲಿ ಇರೋ ಅಡುಕಲೆ ಕೋಡುಬಳೆ ತರೋದು ಮರೀಬೇಡಾ'' ಅಂತ ಶರಲೇಖ ಇದ್ದಲ್ಲಿಂದಲೇ ಕೂಗಿದ. ಕೋಡುಬಳೆ ಡಬ್ಬವನ್ನ ಬದುವಿನ ಮೇಲಿಂದ ತೆಗೆಯುತ್ತಿದ್ದಾಗಲೇ ಶರಲೇಖ ''ವತ್ಸನಾ ಬೇಗ ಬಾ'' ಅಂತ ಕೂಗಿದ್ದು ಕೇಳಿಸಿತು. ಏನಾಯಿತೋ ಅಂತ ನಾನು ಗಾಬರಿಯಿಂದ ಕೈಯಲ್ಲಿ ಡಬ್ಬ ಹಿಡಿದುಕೊಂಡೇ ಓಡಿದೆ. ಶರಲೇಖ ಟಿ.ವಿ. ಪರದೆಯನ್ನೇ ದಿಟ್ಟಿಸುತ್ತಿದ್ದ. ನಾನೂ ಅಲ್ಲಿ ನೋಡಿದೆ. ಮಳೆ ನಿಂತಿತ್ತು. ಮೋಡಗಳೆಲ್ಲಾ ಚದುರಿದ್ದವು. ಪ್ರಖರವಾದ ಬಿಸಿಲು ಮೈದಾನವನ್ನೆಲ್ಲಾ ಆವರಿಸಿತ್ತು. ''ಸಧ್ಯ, ಇನ್ನು ಮ್ಯಾಚು ನೋಡಬಹುದು. ಯಾಕೆ ಹಾಗೆ ಕೂಗಿದೆ'' ಅಂತ ನಾನು ಶರಲೇಖನನ್ನ ಕೇಳಿದೆ. ಶರಲೇಖ ಉತ್ತರಿಸಲಿಲ್ಲ. ಟಿ.ವಿ.ಯ ವಾಲ್ಯೂಮ್ ಎತ್ತರಿಸಿದ.

ಕಾಮೆಂಟೇಟರ್‌ಗಳ ಮಾತುಕತೆ ಕೇಳಿಸತೊಡಗಿತು. ಯಾವುದೋ ಸೂತಕದ ಮನೆಯಲ್ಲಿದ್ದಂತೆ ಅವರುಗಳು ಗಾಬರಿಯಿಂದ ಪಿಸುಗುಟ್ಟುತ್ತಿದ್ದರು. ''ಸೂರ್ಯನ ಚಲನೆ ನಿಂತು ಬಿಟ್ಟಿದೆಯಂತೆ ಅದಕ್ಕೆ ಮೋಡಗಳೆಲ್ಲಾ ಅಷ್ಟು ಬೇಗ ಚದುರಿದವು.'' ಅಂತ ಒಬ್ಬ ಹೇಳಿದರೆ, ಇನ್ನೊಬ್ಬ ''ಏನು ಗ್ರಹಚಾರ ಬಂತಪ್ಪಾ, ಎಲ್ಲಾ ಗ್ಲೋಬಲ್ ವಾರ್ಮಿಂಗ್ ಪ್ರಭಾವ'' ಅಂತ ತನಗೆ ತಿಳಿಯದ ವಿಜ್ಞಾನದಲ್ಲಿ ಉತ್ತರ ಹುಡುಕುತ್ತಿದ್ದ.

ನನಗೆ ಒಂದು ಕ್ಷಣ ಬವಳಿ ಬಂದ ಹಾಗಾಯಿತು. ಹೊಟ್ಟೆಯ ತಳಭಾಗದಲ್ಲಿ ಯಾವುದೋ ತಣ್ಣಗಿನ ಕಪ್ಪೆ ಓಡಾಡುತ್ತಿರುವ ಅನುಭವ. ''ನಾವೀಗ ಏನು ಮಾಡಬೇಕು? ಏನು ಗತಿ?'' ಅಂತ ಅರ್ಥವಿಲ್ಲದ ಮಾತುಗಳು ಯಾಂತ್ರಿಕವಾಗಿ ನನ್ನ ಬಾಯಿಂದ ಹೊರಬಿದ್ದವು.

ಶರಲೇಖ ನನ್ನ ಕಡೆ ತಿರುಗಿ '' ಕೈಯಲ್ಲಿರುವ ಡಬ್ಬಿಯಿಂದ ಒಂದು ಕೋಡುಬಳೆ ತೆಗೆದು ಕೊಡು'' ಅಂತ ಸಮಾಧಾನವಾಗಿ ಹೇಳಿದ. ಅವನ ಸಮಾಧಾನ ಕಂಡು ನನ್ನಲ್ಲಿದ್ದ ತೀವ್ರ ಗಾಬರಿ ಕೋಪಕ್ಕೆ ತಿರುಗಿತು. ''ಇಡೀ ಡಬ್ಬಾನೇ ತಿಂದು ಸಾಯಿ'' ಅಂತ ಕೂಗುತ್ತಾ ಡಬ್ಬವನ್ನು ಅವನ ಕಡೆ ರೊಂಯ್ಯನೆ ಎಸೆದೆ. ಶರಲೇಖ ಅದನ್ನು ಕ್ಯಾಚ್ ಹಿಡಿದ ರೀತಿ ಯಾವ ರಿಕ್ಕೀ ಪಾಂಟಿಂಗ್‌ನೂ ನಾಚಿಸುವ ಹಾಗಿತ್ತು.

ಶರಲೇಖ ಡಬ್ಬವನ್ನು ಒಂದು ಪಕ್ಕಕ್ಕಿಟ್ಟು, ''ವತ್ಸನ, ಸ್ವಲ್ಪ ಸಮಾಧಾನ ಮಾಡಿಕೋ. ಅಂತರಿಕ್ಷದಲ್ಲಿ ನಡೆಯುವ ವಿದ್ಯಮಾನಗಳನ್ನು ನೀನು ನಾನು ನಿಯಂತ್ರಿಸಲಾದೀತೇ? ಇಗೋ ಸ್ವಲ್ಪ ನೀರು ಕುಡಿ. ಹತ್ತು ಬಾರಿ ಆಳವಾಗಿ ಉಸಿರಾಡು. ನಿನ್ನ ಆತಂಕ ತಹಬಂದಿಗೆ ಬರುತ್ತದೆ. ಆಮೇಲೆ ಏನು ಮಾಡಬೇಕು ನೋಡೋಣ'' ಅಂತ ಹೇಳುತ್ತಾ ಶರಲೇಖ ಮೇಜಿನ ಮೇಲಿದ್ದ ನೀರಿನ ಹೂಜಿಯಿಂದ ಒಂದು ಲೋಟ ನೀರು ಬಗ್ಗಿಸಿ ನನಗೆ ಕುಡಿಯಲು ಕೊಟ್ಟ. ಅವನ ದನಿಯಲ್ಲಿದ್ದ ಅನುಕಂಪ, ಸಹಾನುಭೂತಿ ಇವುಗಳು ನನ್ನ ಗಾಬರಿಯನ್ನು ಬಹುಮಟ್ಟಿಗೆ ತಹಬಂದಿಗೆ ತಂದವು.

''ಅಲ್ಲಾ ಶರಲೇಖ, ಸಮಾಧಾನದಿಂದ ಇರು ಅಂತೀಯಲ್ಲಾ. ಸೂರ್ಯ ಒಂದೇ ಸಮನೆ ಭೂಮಿ ಮೇಲೆ ಬೆಳಗ್ತಾ ಇದ್ರೆ, ಕೇವಲ ಕೆಲವೇ ವಾರಗಳಲ್ಲಿ ತಾಪಮಾನ ಇನ್ನೂರು ಮುನ್ನೂರು ದಾಟಿ ನಾವೆಲ್ಲಾ ಸುಟ್ಟು ಬೂದಿ ಆಗುಲ್ವೇ? ಯಾವ ವಿಜ್ಞಾನಿ ಪುನಃ ಭೂಮಿನ ರೀಸ್ಟಾರ್ಟ್ ಮಾಡುಕ್ಕಾಗುತ್ತೆ? ಯಾವೋನೂ ಏನೂ ಮಾಡುಕ್ಕಾಗುಲ್ಲ'' ಅಂತ ರೇಗಿದೆ.

''ಸೂರ್ಯದೇವ ಚಲಿಸದೇ ಒಂದೇ ಕಡೆ ನಿಂತರೆ, ಭೂದೇವಿಯ ಸಕಲ ಚರಾಚರ ಜೀವಿಗಳೆಲ್ಲಾ ಸುಟ್ಟು ಹೋಗುತ್ತವೆ ಅನ್ನೋ ವಿಷಯ ನನಗೂ ತಿಳಿದಿದೆ. ಆದ್ರೆ ಯಾರೂ ಏನೂ ಮಾಡುಕ್ಕಾಗುಲ್ಲ ಅನ್ನೋದನ್ನ ನಾನು ಒಪ್ಪಲಾರೆ.'' ಅಂದ ಶರಲೇಖ.

''ಅಹಹ, ಭೂದೇವಿ ಅಂತೆ, ಸೂರ್ಯದೇವ ಅಂತೆ. ಎಲ್ಲಿಂದ ಬಂದ್ರಪ್ಪ ಈ ದೇವಿ ದೇವತೆಗಳು? ಭೂಮಿ ಒಂದು ಗ್ರಹ, ಸೂರ್ಯ ಒಂದು ಜುಜುಬಿ ನಕ್ಷತ್ರ ತಿಳ್ಕೋ'' ಅಂತ ನಾನು ಹೇಳಿದೆ. ಅವನು ಅಷ್ಟು ಸಮಾಧಾನದಿಂದ ಇರೋದು ನೋಡಿ ನನಗೆ ಇರಿಟೇಟ್ ಆಗ್ತಾ ಇತ್ತು.

''ವತ್ಸನ, ನಿನ್ನ ಸಂಸ್ಕೃತೀನೇ ಬೇರೆ. ನನ್ನದೇ ಬೇರೆ. ನಾನು ಯಾವುದನ್ನೂ ಪ್ರಮಾಣವಿಲ್ಲದೇ ಒಪ್ಪೋದಿಲ್ಲ. ಸೂರ್ಯ ಕೇವಲ ಒಂದು ನಕ್ಷತ್ರ ಅಂತ ನಂಬೋದಕ್ಕೆ ನನ್ನಲ್ಲಿ ಯಾವ ಪುರಾವೆಯೂ ಇಲ್ಲ. ಆದರೆ ದೇವ ದೇವತೆಗಳು ಇರ್ತಾರೆ ಅನ್ನೋದಕ್ಕೆ ನೀನೇ ನೋಡಿರೋ ಹಾಗಿ ಸಾಕ್ಷಾತ್ ಇಂದ್ರದೇವ ನಮ್ಮ ಈ ಫ್ಲಾಟಿಗೆ ಮೂರು ಬಾರಿ ಭೇಟಿ ಕೊಟ್ಟಿರೋದು ಸುಳ್ಳಲ್ಲ. ಹಾಗಾಗಿ ಇಂದ್ರದೇವನ ಅಸ್ತಿತ್ವ ನನಗೆ ಪ್ರತ್ಯಕ್ಷ ಪ್ರಮಾಣ. $E=MC^2$ ಕೇವಲ ಒಂದು ಹಿಯರ್ ಸೇ ಅಷ್ಟೇ'' ಅಂತ ಶರಲೇಖ ತುಸು ಖಾರವಾಗಿಯೇ ಹೇಳಿದ.

''ಹಾಗಾದ್ರೆ ಈಗ ಏನು ಮಾಡೋಣ ಅಂತೀ?'' ಅಂತ ನಾನು ಕೇಳಿದೆ.

ಶರಲೇಖ ಉತ್ತರಿಸಲಿಲ್ಲ. ನೇರವಾಗಿ ಷೋಕೇಸಿನ ಬಳಿ ಹೋಗಿ ಅದರ ಮೇಲಿದ್ದ ಇಂದ್ರದಂಡವನ್ನು ಕೈಯಲ್ಲಿ ಹಿಡಿದು ಇಂದ್ರದೇವನನ್ನು ಆಹ್ವಾನಿಸಿದ. ನೋಡು ನೋಡುತ್ತಿದ್ದಂತೆ ಇಂದ್ರದೇವ ನಮ್ಮ ಮುಂದೆ ನಿಂತಿದ್ದ. ''ನೀವು ನನ್ನನ್ನು ಕರೆದಿರೋದು ಯಾಕೆ ಅಂತ ನನಗೆ ತಿಳಿದಿದೆ. ಇದು ಕೇವಲ ಭೂಮಂಡಲದ ಸಮಸ್ಯೆ ಅಲ್ಲ, ಇಡೀ ಸೌರಮಂಡಲದ್ದು. ಇದನ್ನು ಪರಿಹರಿಸುವ ಸಲುವಾಗಿ ತ್ರಿಮೂರ್ತಿಗಳ ಸಭೆ ನಡೀತಿದೆ. ನೀವಿಬ್ಬರೂ ನನ್ನ ಭಕ್ತರು. ನಿಮ್ಮ ರಕ್ಷಣೆ ನನ್ನ ಜವಾಬ್ದಾರಿ. ಇನ್ನು ಎಪ್ಪತ್ತೆರಡು ಘಂಟೆಗಳ ಕಾಲ ಈ ಫ್ಲಾಟ್ ಬಿಟ್ಟು ಕದಲಬೇಡಿ. ಅಷ್ಟರಲ್ಲಿ ಎಲ್ಲವೂ ಸರಿಹೋಗುತ್ತದೆ. ಹೊರಗಿನ ಸಂಪರ್ಕವಿಲ್ಲದಿದ್ದರೆ ವಾಸಿ. ಅನಗತ್ಯ ಆತಂಕ ತಪ್ಪುತ್ತದೆ.'' ಎಂದು ಹೇಳಿ, ಶರಲೇಖನಿಂದ ದಂಡವನ್ನು ಪಡೆದು ನೇರವಾಗಿ ಟಿ.ವಿ. ಬಳಿ ಸಾರಿ, ಇಂದ್ರದೇವ ಟಿ.ವಿ. ಪರದೆಯ ಮೇಲೆ ದಂಡವನ್ನು ಬೀಸಿದ. ಬೀಸಿದ ರಭಸಕ್ಕೆ ಪರದೆ ಚುಪ್ಪಾಚೂರಾಗಿ, ಗಾಜಿನ ಚೂರುಗಳು ಮುಂದಿದ್ದ ಕಾರ್ಪೆಟ್ಟಿನ ಮೇಲೆ ಹರಡಿತು. ಇಂದ್ರದೇವ ಬಿದ್ದಿದ್ದ ಚೂರುಗಳಲ್ಲಿ ಒಂದನ್ನು ಹೆಕ್ಕಿ ತೆಗೆದು ಶರಲೇಖನಿಗೆ ಕೊಟ್ಟು ಅದರೊಂದಿಗೆ ದಂಡವನ್ನೂ ಹಿಂತಿರುಗಿಸಿ ಅಂತರ್ಧಾನನಾದ. ಶರಲೇಖನಿಗೆ ಇಂದ್ರದೇವನ ಮಾತಿನಲ್ಲಿ ಅತೀವ ವಿಶ್ವಾಸವಿರುವಂತೆ ಕಂಡಿತು. ನಿರ್ಯೋಚನೆಯಿಂದ ಶಿಳ್ಳೆ ಹಾಕುತ್ತಾ ಟೀ ಮಾಡಲು ಹೊರಟ.

ಆ ಎಪ್ಪತ್ತೆರಡು ಘಂಟೆಗಳನ್ನು ನೆನಪಿಸಿಕೊಂಡರೆ ಈಗಲೂ ಮೈ ಜುಮ್ಮೆನ್ನುತ್ತದೆ. ಟಿ.ವಿ. ನಿಷ್ಕ್ರಿಯವಾಗಿದ್ದರಿಂದ ಆ ಸಮಯದಲ್ಲಿ ಹೊರಗಿನ ಪ್ರಪಂಚದೊಂದಿಗೆ ಸಂಪರ್ಕವೇ ಇರಲಿಲ್ಲ. ಕಿಟಕಿಯಾಚೆ ಕಣ್ಣು ಕೋರೈಸುವ ಬೆಳಕು. ನಮ್ಮ ಭಾಗದಲ್ಲಿ ಏರಿದ ಉಷ್ಣತೆಯಾದರೆ ಅಮೆರಿಕೆಯಲ್ಲಿ ಮೈ ಕೊರೆಯುವ ಚಳಿ ಇರಬೇಕು ಅಂತ ನಾನು ಊಹಿಸಿದೆ.

ಅಂತೂ ಎಪ್ಪತ್ತೆರಡು ಘಂಟೆಗಳು ಮುಗಿಯುವ ಸಮಯಕ್ಕೆ ಇಂದ್ರದೇವ ನಮ್ಮ ಮುಂದೆ ಪ್ರತ್ಯಕ್ಷನಾದ.

''ಈ ಸಮಸ್ಯೆಗೆಲ್ಲಾ ನೀವು ಮಾನವರೇ ಕಾರಣ. ಚಂದ್ರಯಾನ, ಮಂಗಳ ಯಾನ, ಮೂನ್ ಮಿಷನ್ ಅಂತ ಚಂದ್ರದೇವನನ್ನ ಬೃಹಸ್ಪತಿಗಳನ್ನ ಅಟ್ಟಕ್ಕೇರಿಸಿದ್ದರ ಫಲ ಇದು. ಸೂರ್ಯ ದೇವ ಮುನಿಸಿಕೊಂಡು ತನ್ನ ಪ್ರತಾಪಾನ ತೋರಿಸಿದ. ತಕ್ಷಣ ಬ್ರಹ್ಮ ವಿಷ್ಣು ಮಹೇಶ್ವರರು ಸಭೆ ಸೇರಿ ಸೂರ್ಯದೇವನನ್ನು ಸಮಾಧಾನ ಪಡಿಸಲು ನನ್ನನ್ನು ಕಳಿಸಿದರು. ನಾನು ಅವನಿಗೆ ಮಾನವರ ತೀಕ್ಷ್ಣ ಪ್ರಗತಿಯ ಬಗ್ಗೆ ಮನವರಿಕೆ ಮಾಡಿಕೊಟ್ಟೆ. ಸ್ಯಾಟರ್ನ್ ಲ್ಯಾಂಡರ್ ಎಂಬ ಒಂದು ಯೋಜನೆಯನ್ನು ಮಾನವರು ಹಮ್ಮಿಕೊಂಡಿರುವುದಾಗಿ ತಿಳಿಸಿದೆ. ಸೂರ್ಯದೇವನಿಗೆ ಮರ್ಮಾಘಾತವಾದಂತಾಯಿತು ಹೇಳಿಕೇಳಿ ಶನೀಶ್ವರ ಸೂರ್ಯ ಮತ್ತು ಛಾಯಾದೇವಿಯರ ಮಗ. ಅವನ ಮೇಲೆ ಮನುಕುಲದ ಕಳಂಕ ಏರಿ ಬರುವಂತಾದರೆ ಛಾಯಾದೇವಿ ಸುಮ್ಮನೆ ಬಿಡುವಳೇ. ನಾನು ಆ ಪ್ರಾಜೆಕ್ಟ್ ವಿಫಲ ಪಡಿಸುವುದಾಗಿ ಮಾತುಕೊಟ್ಟನಂತರ ಸೂರ್ಯ ತನ್ನ ದೈನಂದಿನ ಯಾತ್ರೆಯನ್ನು ಮುಂದುವರಿಸಲು ಒಪ್ಪಿದ. ಇನ್ನು ಹತ್ತು ನಿಮಿಷಗಳಲ್ಲಿ ಎಲ್ಲವೂ ಎಪ್ಪತ್ತೆರಡು ಘಂಟೆಗಳ ಹಿಂದೆ ಇದ್ದ ಸ್ಥಿತಿಗೆ ಮರಳುತ್ತವೆ. ಕಾಲಭೈರವ ಜಗತ್ತಿನ ದಾಖಲೆಗಳಿಂದ ಈ ಎಪ್ಪತ್ತೆರಡು ಘಂಟೆಗಳನ್ನು ತೆಗೆದುಹಾಕಲು ನಿರ್ಧರಿಸಿದ್ದಾನೆ. ನೀವುಗಳು ರೀಸೆಟ್ ಅಂತೀರಲ್ಲ ಹಾಗೆ ಈ ಅವಧಿಯಲ್ಲಿ ನಡೆದ ಯಾವ ಕಾರ್ಯವೂ ಊರ್ಜಿತವಾಗದು. ಮರಣಿಸಿದ್ದವರು ತಮ್ಮ ನಿಜ ಆಯುಷ್ಯವನ್ನು ಪಡೆಯುವರು. ಯಾರಿಗೂ ಈ ಎಪ್ಪತ್ತೆರಡು ಘಂಟೆಗಳ ನೆನಪೇ ಉಳಿದಿರುವುದಿಲ್ಲ, ಶುಭವಾಗಲಿ.'' ಎಂದು ಹೇಳಿ ಇಂದ್ರದೇವ ನಿರ್ಗಮಿಸಿದ.

★★★★

ಸಂಜೆ ಆರು ಗಂಟೆಯ ಸಮಯ. ಶರಲೇಖ ಮತ್ತು ನಾನು ಟಿ.ವಿ. ಮುಂದೆ ಕುಳಿತಿದ್ದೆವು. ಧರ್ಮಶಾಲಾದಲ್ಲಿ ಇಂಡಿಯಾ ಮತ್ತು ಸೌತ್ ಆಫ್ರಿಕಾಗಳ ನಡುವೆ ಮೊದಲ ಟಿಟ್ವೆಂಟಿ ಮ್ಯಾಚ್ ಏಳು ಘಂಟೆಗೆ ಪ್ರಾರಂಭವಾಗುವ ಸೂಚನೆಗಳು ಏನೇನೂ ಕಾಣುತ್ತಿರಲಿಲ್ಲ, ಮಳೆ ಇನ್ನೂ ಧಾರಾಕಾರವಾಗಿ ಸುರಿಯುತ್ತಿತ್ತು. ನಾನು ಟೀ ಮಾಡಿಕೊಂಡು ಬರಲು ಅಡಿಗೆ ಮನೆಯ ಕಡೆಗೆ ಹೊರಟೆ. ''ಬರ್ತಾ ಆ ಪ್ಲಾಸ್ಟಿಕ್ ಡಬ್ಬೀಲಿ ಇರೋ ಅಡುಕಲೆ ಕೋಡುಬಳೆ ತರೋದು ಮರೀಬೇಡಾ'' ಅಂತ ಶರಲೇಖ ಇದ್ದಲ್ಲಿಂದಲೇ ಕೂಗಿದ. ಕೋಡುಬಳೆ ತೆಗೆದುಕೊಂಡು ಎರಡು ಕಪ್ ಟೀ ಗಳನ್ನು ಹಿಡಿದು ನಾನು ಹಜಾರಕ್ಕೆ ಬಂದೆ. ಮಳೆ ಸುರಿಯುತ್ತಲೇ ಇತ್ತು. ಕೊನೆಗೆ ಏಳೂವರೆಯ ಹೊತ್ತಿಗೆ ಮ್ಯಾಚ್ ರದ್ದಾದನಂತರ ಛಾನೆಲ್ ಬದಲಿಸಿ ಅಮೆಜಾನ್ ಪ್ರೈಮ್ ವಿಡಿಯೋ ಹಾಕಿದೆವು. ನೋಡುತ್ತಿದ್ದಾಗ ಅಕಸ್ಮಾತ್ ಟಿ.ವಿ. ಪರದೆಯ ಒಂದು ಮೂಲೆಯಲ್ಲಿ ಒಂದು ಪುಟ್ಟ ಒಡಕು ಕಾಣಿಸಿತು. ''ಅರೆ, ನಮ್ಮ ಟಿ.ವಿ. ಪರದೆ ಡ್ಯಾಮೇಜಾಗಿರೋ ಹಾಗೆ ಕಾಣುತ್ತೆ. ವಾರೆಂಟೀ ಇನ್ನೂ ಇದೆಯೇನು?'' ಅಂತ ನಾನು ಶರಲೇಖನನ್ನು ಕೇಳಿದೆ. ಅವನು ಉತ್ತರಿಸಲಿಲ್ಲ, ನಸುನಕ್ಕು ತನ್ನ ಜೋಬಿನಿಂದ ಒಂದು ಗಾಜಿನ ಚೂರನ್ನು ತೆಗೆದು, ''ಇದು ಆ ಒಡಕಿಗೆ ಮ್ಯಾಚ್ ಆಗುತ್ತದೆಯೇ ನೋಡು'' ಅಂತ ಆ ಚೂರನ್ನು ನನ್ನ ಕೈಗಿತ್ತ. ಅದನ್ನು ನೋಡಿದ ತಕ್ಷಣ ಕಳೆದ ಎಪ್ಪತ್ತೆರಡು ಘಂಟೆಗಳ ವಿದ್ಯಮಾನಗಳೆಲ್ಲವೂ ನೆನಪಿಗೆ ಬಂದವು. ನಿಮ್ಮ ಅವಗಾಹನೆಗಾಗಿ ಅದನ್ನು ಮೇಲೆ ದಾಖಲಿಸಿರುವೆ. ಎಲ್ಲಾ ಕಾಕಮ್ಮ ಬುಳ್ಳಮ್ಮನ ಕಥೆ ಅಂತೀರಾ? ಈಗಲೂ ಗಾಜಿನ ಚೂರು ನನ್ನ ಬಳಿ ಇದೆ. ಬನ್ನಿ ಬೇಕಾದ್ರೆ ತೋರಿಸ್ತೀನಿ. ಇದಕ್ಕಿಂತ ಇನ್ನೇನು ಪುರಾವೆ ಬೇಕ್ರಿ ನಿಮಗೆ?

# ಅಪರಂಜಿ ಬಳಗಕ್ಕೆ ಆಹ್ವಾನ

ಆತ್ಮೀಯ ಓದುಗರೇ

**ನಿಮ್ಮ ಬಂಧು ಬಳಗ ಕಡೇ ಪಕ್ಷ ಮುಂದಿನ ಹತ್ತು ವರ್ಷಗಳವರೆಗೆ ಪ್ರತಿ ತಿಂಗಳು ನಿಮ್ಮನ್ನು ಹೃದಯತುಂಬಿ ನೆನೆಸಿಕೊಳ್ಳುವಂಥಾ ಒಂದು ಸುವರ್ಣ ಅವಕಾಶ ನಿಮ್ಮ ಮುಂದಿದೆ.** ಅದು ಅಪರಂಜಿಯ ಓದುಗ ಬಳಗವನ್ನು ಹೆಚ್ಚಿಸುವುದು. ನೀವು ಮಾಡಬೇಕಾದುದಿಷ್ಟೆ. ನಿಮ್ಮ ಬಂಧುಗಳಿಗೆ / ಸ್ನೇಹಿತರಿಗೆ ನೀವು ಅಪರಂಜಿಯನ್ನು ಉಡುಗೊರೆಯಾಗಿ ಕೊಡಬಹುದು. **ಪ್ರತಿ ತಿಂಗಳು ಅಪರಂಜಿ ಅವರ ಮನೆಗೆ ಹೋದಾಗ ಅವರು ನಿಮ್ಮನ್ನು ಕೃತಜ್ಞತಾಭಾವದಿಂದ ನೆನೆಯುತ್ತಾರೆ.** ಅದಕ್ಕೆ ನೀವು ಈ ಕೆಳಗಿನ ಅರ್ಜಿಯನ್ನು ತುಂಬಿ ನಮಗೆ ಕಳಿಸಿದರೆ ಸಾಕು. ನಂತರದ ದಿನಗಳಲ್ಲಿ ಅಪರಂಜಿ ನಿಮ್ಮ ಬಂಧುಗಳ/ಸ್ನೇಹಿತರ ಮನೆಗೆ ಅಂಚೆಯಲ್ಲಿ ತಲಪುತ್ತದೆ. **ಪ್ರತಿ ಹೊಸ ಚಂದಾದಾರರಿಗೆ ಹತ್ತು ವರ್ಷದ ಚಂದಾ ರೂ. 750/– ರಂತೆ ಚೆಕ್/ಡಿಡಿ/ ಆನ್‌ಲೈನ್ ಮೂಲಕ ಕೊರವಂಜಿ ಕಾರ್ಯಾಲಯದ ವಿಳಾಸಕ್ಕೆ ಅಥವಾ ಸಂಪರ್ಕ ವಿಳಾಸಕ್ಕೆ ಅಥವಾ ಬ್ಯಾಂಕ್ ಮೂಲಕ ಸಲ್ಲಿಸಬಹುದು.** ಬ್ಯಾಂಕ್ ವಿವರಗಳನ್ನೂ ಕೊಟ್ಟಿದ್ದೇವೆ.

## ಅರ್ಜಿ ನಮೂನೆ

ಇವರಿಂದ : ಹೆಸರು..............................................................................

ಚಂದಾದಾರರ ಸಂಖ್ಯೆ..............................................................................

**ಉಡುಗೊರೆಯಾಗಿ ಅಪರಂಜಿಯನ್ನು ಪ್ರತಿ ತಿಂಗಳೂ ಈ ಕೆಳಕಂಡ ವಿಳಾಸಗಳಿಗೆ ತಲುಪಿಸಿ.**

1) ಹೆಸರು..............................................................................

ವಿಳಾಸ..............................................................................

ದೂರವಾಣಿ : ....................... ಈಮೈಲ್ ವಿಳಾಸ: ....................................

2) ಹೆಸರು..............................................................................

ವಿಳಾಸ..............................................................................

ದೂರವಾಣಿ : ....................... ಈಮೈಲ್ ವಿಳಾಸ: ....................................

| | |
|---|---|
| **Account Name** | **: KORAVANJI APARANJI TRUST** |
| **Account Number** | **:** 109804180000056 |
| **IFSC Code** | **:** SVCB0000098 |
| **Name of the Bank** | **:** SVC CO-OPERATIVE BANK LTD |
| **Branch Code /Name** | **:** MALLESHWARAM |
| **Account Type** | **:** CURRENT |

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG



**Civil Contractors for Complete Construction Activities**

Mob: 9740968677


ಹಗಲೇ ಎಲ್ಲ, ರಾತ್ರಿ ಇಲ್ಲ

# ಸೂರ್ಯ ಮುಳುಗದ ಭೂಲೋಕ

**● ಪ್ರಕಾಶ್ ಶೆಟ್ಟಿ**

ಅಕ್ಟೋಬರ್ ಒಂದರಿಂದ ಸೂರ್ಯಾಸ್ತಮ ನಾವು ಕಾಣುವುದಿಲ್ಲ. ದಿನದ ಇಪ್ಪತ್ನಾಲ್ಕು ಗಂಟೆಗಳೂ ಭೂಲೋಕವಿಡೀ ಬರೀ ಹಗಲು ಇರುತ್ತದೆ ಎಂಬ ಒಂದು ಸುದ್ದಿ ವಾಟ್ಸ್ಯಾಪ್ ಮೂಲಕ ಅದ್ಯಾರು ಹರಿದುಬಿಟ್ಟಿದ್ದಾರೋ. ಎಲ್ಲರ ಬಾಯಲ್ಲೂ ಅದೇ ಚರ್ಚೆ. ಜನ ವಾಟ್ಸ್ಯಾಪ್ ನಲ್ಲಿ ಹೇಗೆ ಪ್ರತಿಕ್ರಿಯಿಸಿದ್ದಾರೆ ಎಂಬುದನ್ನು ಇಲ್ಲಿ ಒಟ್ಟುಗೂಡಿಸಿ ಹಾಕಿದ್ದೇವೆ.

* ಹಾಗಾದರೆ ನಾವು ಮಲಗುವುದು ಯಾವಾಗ ?
* ದೂರ ಪ್ರಯಾಣದ ಬಸ್‌ನಲ್ಲಿ ಡ್ರೈವರ್ ನಿದ್ದೆ ಮಾಡಿಕೊಂಡು ಬಸ್ ಚಾಲನೆ ಮಾಡುವುದಿಲ್ಲ ಎಂದು ಸಮಾಧಾನಪಟ್ಟುಕೊಳ್ಳಬಹುದು.




* ಡಿನ್ನರ್‌ಗೆ ಇನ್ನು ಮುಂದೆ ಏನು ಹೇಳಬೇಕೆಂದು ನನಗೆ ಯಾರಾದರೂ ಸಹಾಯ ಮಾಡುವಿರಾ ?
* ಇನ್ನು ಹಗಲು ದರೋಡೆ ಮಾತ್ರ ಇರುತ್ತದೆ ಎಂಬುದು ಕಠೋರ ಸತ್ಯ!
* ವಿದ್ಯುತ್ ಬಿಲ್ ಶಾಕ್ ಆಗುವಷ್ಟು ಕಡಿಮೆ ಆಗಲಿದೆ ಎಂದು ತಿಳಿದು ನಾನು ಈಗಲೇ ರೋಮಾಂಚನಗೊಂಡಿದ್ದೇನೆ !
* ಆ ದಿನ ಬೇಗ ಬರಲೆಂದು ಪ್ರಾರ್ಥಿಸುತಿದ್ದೇನೆ. ಯಾಕೆಂದರೆ ನಮ್ಮ ಮನೆ ವಠಾರದ ಸುತ್ತ ಮುತ್ತ ಬೀದಿ ನಾಯಿಗಳಿಗೆ ಮಧ್ಯ ರಾತ್ರಿಯಾದರೆ ಸಾಕು, ಗೂಳಿಡಲು ಆರಂಭಿಸುತ್ತವೆ. ಅಬ್ಬಾ! ಕೊನೆಗೂ ಅದರಿಂದ ಮುಕ್ತಿ ಸಿಗುತ್ತದೆ ಎಂಬುದು ಖುಷಿಯ ವಿಚಾರ.
* ವಿದೇಶಗಳಲ್ಲಿ ನೈಟ್ ಕ್ಲಬ್‌ಗಳು ಮುಚ್ಚುವುದಿಲ್ಲ ಎಂದು ನನ್ನ ಬಲವಾದ ನಂಬಿಕೆ.
* ನಾನು ನಮ್ಮ ಮನೆಯ ಮಲಗುವ ಕೋಣೆಗಳನ್ನು ಡಾರ್ಕ್ ರೂಮ್ ಆಗಿ ಬದಲಾವಣೆ ಮಾಡುವ ಯೋಚನೆ ಮಾಡಿದ್ದೇನೆ.
* ಇನ್ನು ಮುಂದೆ ಆಕಾಶದಲ್ಲಿ ಚಂದಿರನನ್ನು ನೋಡಲಾಗುವುದಿಲ್ಲ ಎಂದು ತಿಳಿದಾಗ ಅಳುವೇ ಬಂದುಬಿಡುತ್ತದೆ! ಅಯ್ಯೋ ಚಂದ್ರನನ್ನು ನೋಡಬೇಕಾದರೆ ಇನ್ನು ನಾವೆಲ್ಲ ನೇರ ಚಂದ್ರಯಾನಕ್ಕೆ ಟಿಕೆಟ್ ಕಾದಿರಿಸಬೇಕಾ ?!
* ಒಂದು ಶುಭ ವಾರ್ತೆ. ವಾಟ್ಸ್ಯಾಪ್ ನಲ್ಲಿ ಗುಡ್ ನೈಟ್ ಮತ್ತು ಗುಡ್ ಮಾರ್ನಿಂಗ್‌ಗಳ ಕಾಟ ಏಕ್‌ದಂ ನಿಂತುಬಿಡುವುದರಲ್ಲಿ ಯಾವುದೇ ಸಂಶಯವಿಲ್ಲ.

# ಸಾಫ್ಟ್‌ವೇರ್ ದಿನಚರಿ

● **ಶಂಸ ಐತಾಳ**

'ರಾತ್ರಿ' ಎಂಬ ಪದವನ್ನು ಕನ್ನಡ ನಿಘಂಟಿನಿಂದ ತೆಗೆದು ಹಾಕಬಹುದಿತ್ತು. ಬೆಳಿಗ್ಗೆ (0–5 ಗಂಟೆ), ಪೂರ್ವಾಹ್ನ (5–10 ಗಂಟೆ), ಮಧ್ಯಾಹ್ನ (10–14 ಗಂಟೆ), ಅಪರಾಹ್ನ (14–19 ಗಂಟೆ) ಮತ್ತು ಸಂಜೆ (19–24 ಗಂಟೆ) ಇವುಗಳಷ್ಟೇ ಇರುವಂತಹ ಅಖಂಡ ಹಗಲಿನಲ್ಲಿ, ಸಾಫ್ಟ್‌ವೇರ್ ಜಾಬ್‌ನಲ್ಲಿ ಜೀವತೇಯುತ್ತಿರುವ ನನ್ನ ದಿನಚರಿ ಹೀಗಿರುತ್ತಿತ್ತು:

**ಬೆಳಿಗ್ಗೆ 2 ಗಂಟೆಯವರೆಗೆ :** 'ಸೋಷಿಯಲ್ ನೆಟ್‌ವರ್ಕ್' ಎಂಬೋ ಆಡುಂಬೊಲದಲ್ಲಿ ವಿಹರಿಸುವುದು (ವಾಟ್ಸಪ್, ಎಸ್ಸೆಮ್ಮೆಸ್, ಟ್ವಿಟರ್, ಸ್ನ್ಯಾಪ್‌ಚಾಟ್, ಇನ್‌ಸ್ಟಾಗ್ರಾಮ್, ಫೇಸ್‌ಬುಕ್‌ಗಳನ್ನು ಪರಿಶೀಲಿಸುವುದು. ಷೇರ್/ಫಾರ್‌ವರ್ಡ್ ಮತ್ತು ಅನಾವಶ್ಯಕ ಇ-ಕಸಗಳನ್ನು ಡಿಲೀಟ್‌ಮಾಡುವ ಕೆಲಸ).

**ಬೆಳಿಗ್ಗೆ 2 ರಿಂದ 4 1/2 ಗಂಟೆಯವರೆಗೆ :** ಸ್ವ-ನಿರ್ಮಿತ – ಕಾಳಗೃಹದಲ್ಲಿ ಒಂದನೆಯ ಕಂತಿನ ಹಗಲು ನಿದ್ರೆ.

**ಬೆಳಿಗ್ಗೆ 4 1/2 ಯಿಂದ 5 ಗಂಟೆಯವರೆಗೆ :** ಗಾಳಿಸಂಚಾರ /ವ್ಯಾಯಾಮ/ಧ್ಯಾನ/ ಯೋಗ

**ಬೆಳಿಗ್ಗೆ 5 ರಿಂದ ಪೂರ್ವಾಹ್ನ 6 ಗಂಟೆಯವರೆಗೆ :** ಅಡುಗೆ ಮಾಡುವ ಕಾಯಕ (ಉದಾಸೀನವೆನಿಸಿದರೆ ಬ್ರೇಕ್‌ಫಾಸ್ಟ್ ಜೊತೆಗೆ ಡಿನ್ನರನ್ನೂ ಆನ್‌ಲೈನ್ ಮೂಲಕ ತರಿಸಿಕೊಳ್ಳುವುದು)

**ಪೂರ್ವಾಹ್ನ 6 ರಿಂದ 6 1/2 ಗಂಟೆಯವರೆಗೆ :** ಹಲ್ಲುಜ್ಜುವುದು, ಸ್ನಾನ ಇತ್ಯಾದಿ.

**ಪೂರ್ವಾಹ್ನ 6 1/2 ಯಿಂದ 7 ಗಂಟೆಯವರೆಗೆ :** ಮೇಕಪ್ ಮಾಡಿಕೊಂಡು ಲ್ಯಾಪ್‌ಟಾಪ್ ಇತ್ಯಾದಿ ಸಕಲ ಶಸ್ತ್ರಾಸ್ತ್ರಗಳೊಂದಿಗೆ ಕಚೇರಿಗೆ ಹೊರಡಲು ಸಿದ್ಧಳಾಗುವುದು.

**ಪೂರ್ವಾಹ್ನ 7 ರಿಂದ 9 ಗಂಟೆಯವರೆಗೆ :** ಮನೆಯಿಂದ ಕೇವಲ ಮೂವತ್ತು ಕಿ.ಮೀಗಳನ್ನು 'ಹತ್ತಿರ'ದಲ್ಲಿರುವ ಕಚೇರಿಗೆ ವೋಲ್ವೋದಲ್ಲಿ ಪಯಣಿಸುವುದು; ಒಂದನೆಯ ಕಂತಿನ ನಿದ್ರೆ ಬಾಕಿ ಉಳಿದಿದ್ದರೆ ಅದನ್ನು ಪೂರ್ಣಗೊಳಿಸುವುದು ಅಥವಾ ಲ್ಯಾಪ್‌ಟಾಪ್ 'ನುಡಿಸುವುದು'.

**ಪೂರ್ವಾಹ್ನ 9 ರಿಂದ ಅಪರಾಹ್ನ 18 ಗಂಟೆಯವರೆಗೆ :** ಕಚೇರಿಯ ಕೆಲಸ. (ನಡುವೆ ಮಧ್ಯಾಹ್ನ 13 ರಿಂದ 14 ಗಂಟೆಯವರೆಗೆ ಭೋಜನ ವಿರಾಮ).

**ಅಪರಾಹ್ನ 18 ರಿಂದ ಸಂಜೆ 20 ರವರೆಗೆ :** ಕಚೇರಿಯಿಂದ ಮನೆಗೆ ವೋಲ್ವೋ ವಿಹಾರ.

**ಸಂಜೆ 20 ರಿಂದ 21 ಗಂಟೆಯವರಗೆ :** ಸೋಷಿಯಲ್ ನೆಟ್‌ವರ್ಕ್‌ನಲ್ಲಿ ಬ್ಯೂಸಿ

**ಸಂಜೆ 21 ರಿಂದ 21 1/2 ಗಂಟೆಯವರೆಗೆ :** ಬೆಳಿಗ್ಗೆ ಮಾಡಿ ಫ್ರಿಜ್‌ನಲ್ಲಿಟ್ಟಿದ್ದ ಅಥವಾ ಆನ್‌ಲೈನ್ ಮೂಲಕ ತರಿಸಿದ್ದ ತಂಗುಳೂಟ.

**ಸಂಜೆ 21 1/2 ರಿಂದ 24 ಗಂಟೆಯವರೆಗೆ :** ಎರಡನೆಂದು ಕಂತಿನ ಹಗಲು ನಿದ್ರೆ.

**ವೀಕೆಂಡ್ ದಿನಗಳು :** ಶನಿವಾರ ಮತ್ತು ಭಾನುವಾರ.

**ಶನಿವಾರ :** ಬೆಳಿಗ್ಗೆ 24x7 ಡೇಕೇರ್ ಸೆಂಟರಿನಿಂದ ಪಾಪುವನ್ನು ತವರುಮನೆಗೆ ಕರೆದುಕೊಂಡುಬರುವುದು. ಇಡೀ ದಿನ ಆದರೊಂದಿಗೆ ಆಟ, ಪಾಠ, ಪಾರ್ಕ್‌ಗೆ ಪ್ರವಾಸ.

**ಭಾನುವಾರ :** ಊಟ-ತಿಂಡಿಯ ಸಮಯವನ್ನು ಹೊರತು ಪಡಿಸಿದಂತೆ ಉಳಿದ ಸಮಯವೆಲ್ಲ ವಿಶ್ರಾಂತಿ/ನಿದ್ರೆ.

ಸಂಜೆ ಪಾಪುವನ್ನು 24x7 ಡೇಕೇರ್ ಸೆಂಟರ್‌ಗೆ ಬಿಟ್ಟುಬರುವುದು.

**ಷರಾ :** ಅಮೆರಿಕದಲ್ಲಿರುವ ಪತಿರಾಯರಿಗೆ ದಿನ ಪೂರ್ತಿ ರಾತ್ರಿಯಾಗಿರುವುದರಿಂದ, ಅವರ ದಿನಚರಿಯ ವಿವರ ತಿಳಿದ ಮೇಲೆ ನನ್ನ ದಿನಚರಿಯಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕಾಗಬಹುದು. ■


## ಬೇಲೂರು ತ್ರಿಬ್ಬಲ್ ಧಮಾಕ

21.9.2019 ರಂದು ಬೇಲೂರರ **100**ನೇ ಕೃತಿ


**ಯೋಗ ವಾಸಿಷ್ಠ ಕಥೆಗಳು** ಬಿಡುಗಡೆಯಾಗಿದೆ

ಪ್ರತಿಗಳಿಗೆ ಸಂಪರ್ಕಿಸಿ :

ಸಾಹಿತ್ಯ ಲೋಕ ಪಬ್ಲಿಕೇಷನ್ಸ್ 99459 39436




ಬೇಲೂರರು ಬರೆದ ಪುಸ್ತಕ **ಕವಿ-ಕಾವ್ಯ-ಸ್ವಾರಸ್ಯ** ಕೃತಿಗೆ ಸರ್.ಎಂ.ವಿ.ಇಂಜನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ **2019ರ ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ** ದೊರೆತಿದೆ.




ಬೇಲೂರರು ಬರೆದಿರುವ ನಾಟಕ **'ಬೊಂಬಾಟ್ ಬೀಚಿ'** ಕೃತಿಗೆ ಮುಂಬಯಿ ಕನ್ನಡ ಸಂಘದಿಂದ ಬಹುಮಾನ ಬಂದಿದೆ.

**ಬೇಲೂರರಿಗೆ ಅಪರಂಜಿಯ ಶುಭ ಹಾರೈಕೆಗಳು**

# ಹಗಲುಗನಸು!

● ಗಣೇಶ ಹೆಗಡೆ

ನಾನು ಸರ್ವೀಸಿನಿಂದ ರಿಟೈರ್ಡ್ ಆದ ಮೇಲೆ ಒಂದು ಪ್ರಸಿದ್ಧ ಹಾಸ್ಯ ಪತ್ರಿಕೆಯಲ್ಲಿ ಉಪ ಸಂಪಾದಕನಾಗಿ ಕೆಲಸ ಮಾಡುತ್ತಿದ್ದೇನೆ. ಅಂದು ಸಂಪಾದಕರು "ಅಲ್ಲಯ್ಯ ಎಷ್ಟು ಸರ್ತಿ ಹೇಳಿದ್ದೀನಿ ನಿನಗೆ ಈ ತರಹ ಬ್ರೇನ್ ಗೇಮ್ ಆಡ್ಬೇಡ ಅಂತ. ಈಗ ನೋಡು ಫಜೀತಿಗಿಟ್ಟುಕೊಂಡಿದೆ. ಓದುಗರಿಂದ ನೂರಾರು ಪ್ರತಿಕ್ರಿಯೆಗಳು ಬಂದು ಸಾರ್ಟ್‌ಔಟು ಮಾಡುವುದೇ ನನಗೆ ಸಮಸ್ಯೆಯಾಗಿದೆ" ಎಂದರು.

ಥಟ್ಟನೆ ನೆನಪಾಯಿತು. "ಇನ್ಮುಂದೆ ರಾತ್ರಿಯೆ ಆಗದೆ ಬರೀ ಹಗಲುಗಳೇ ನಮ್ಮ ಪಾಲಿಗಿದ್ದರೆ... ಈ ಸನ್ನಿವೇಶವನ್ನು ಊಹಿಸಿಕೊಂಡು ಚೊಕ್ಕಟವಾಗಿ ಅನಿಸಿಕೆಗಳನ್ನು ಹಂಚಿಕೊಳ್ಳಿ" ಎಂದು ಕಳೆದ ಸಂಚಿಕೆಯಲ್ಲಿ ಸವಾಲು ಎಸೆದಿದ್ದೆ.

ಕಂಪ್ಯೂಟರ್ ಮುಂದಿದ್ದ ಕುರ್ಚಿಯನ್ನು ನನಗೆ ಬಿಟ್ಟು ಕೊಟ್ಟ ಸಂಪಾದಕರು ಪಕ್ಕದಲ್ಲಿಯೇ ಕುಳಿತು 'ನೀನು ಗಟ್ಟಿಯಾಗಿ ಓದುತ್ತಾ ಹೋಗು, ಚೆನ್ನಾಗಿರುವ ಪ್ರತಿಕ್ರಿಯೆಗಳನ್ನು ಸಾರ್ಟ್ ಮಾಡೋಣ' ಎಂದು ಕಣ್ಮುಚ್ಚಿಕೊಂಡು ರಿಲ್ಯಾಕ್ಸ್ ಮೂಡಿಗೆ ಜಾರಿದರು.

'ಸರ್ ಇದು ಕೊಳ್ಳೇಗಾಲದ ಮಾಂತ್ರಿಕ ಮಹದೇವಯ್ಯನವರ ಪ್ರತಿಕ್ರಿಯೆ' ಇನ್ಮುಂದೆ ರಾತ್ರಿಯೆ ಆಗದೆ ಬರೀ ಹಗಲುಗಳೇ ಇದ್ದರೆ, ನಮ್ಮಂಥಹವರ ಪ್ರೊಫೆಷನ್ನಿಗೆ ಕೊಡಲಿ ಪೆಟ್ಟು ಬೀಳುತ್ತದೆ. ಮಾಟ–ಮಂತ್ರ, ಸ್ಮಶಾನದಲ್ಲಿ ಅಮಾವಾಸ್ಯೆ ಪೂಜೆ ....ಇತ್ಯಾದಿಗಳನ್ನು ನಾವು ಮಾಡುವುದು ಅಪರ ರಾತ್ರಿಯೆ. ನಿಮ್ಮ ಚಿಂತನೆ ಏನಾದರೂ ಅಸ್ತಿತ್ವಕ್ಕೆ ಬಂದರೆ ನಮ್ಮ ಕಸುಬಿನವರು ತೀವ್ರ ಹೋರಾಟಕ್ಕಿಳಿಯಬೇಕಾದೀತು? ಎಚ್ಚರಿಕೆ.

"ಯಾರೊ ಇವ್ನು ವಿಷಯವನ್ನು ತುಂಬಾ ಸೀರಿಯಸ್ಸಾಗಿ ತೆಗೆದುಕೊಂಡಿದ್ದಾನೆ ಅನ್ಸುತ್ತೆ ಎಂದರು ಸಂಪಾದಕರು. "ಯಾಕೊ...ಇದು ಅತಿರೇಕಕ್ಕೆ ಹೋಗಿ ನಮ್ಮ ಕಛೇರಿಯ ಮೇಲೂ ಮಂತ್ರಿಸಿದ ನಿಂಬೆ ಹಣ್ಣು ಎಸೆದಾನು" ಎಂಬ ಭಯವನ್ನು ತೋರ್ಪಡಿಸಿಕೊಳ್ಳದೆ ಮುಂದಿನ ಪತ್ರವನ್ನು ಓದಲಾರಂಭಿಸಿದೆ.

"ಸರ್ ಈ ಪತ್ರ ಬಿಬಿಎಂಪಿ ಇಂಜಿನಿಯರ್ ಪ್ರಾಣನಾಥರದ್ದು, ಇನ್ಮುಂದೆ ರಾತ್ರೆಗಳೇ ಇರದೆ ಬರೀ ಹಗಲುಗಳೇ ಇರುವುದಾದರೆ ನಮ್ಮ ಇಲಾಖೆಗೆ ಒಳ್ಳೆಯ ಹೆಸರು ಬರುವುದಂತೂ ಗ್ಯಾರಂಟಿ..ಹಗಲು ಕಂಡ ಪಾಟ್ ಹೋಲ್ಸಿಗೆ ಇರುಳು ಬಿದ್ದರು ಎಂಬ ಪ್ರಜೆಗಳ ಗೇಲಿಗೆ ಬ್ರೇಕ್ ಬಿದ್ದು, ಹೈಕೋರ್ಟಿನಿಂದ ಪದೇ ಪದೆ ಛೀಮಾರಿ ಕೇಳುವ ಪರಿಸ್ಥಿತಿಯೂ ಕಮ್ಮಿಯಾಗಿ ಒಂಥರಾ ನಮಗೆ ನಿರಾಳವಾಗುತ್ತೆ, ವಂದನೆಗಳು.

"ಇದೊಂದು ಪ್ರಾಮಾಣಿಕ ಚಿಂತನೆ ಅಂತನ್ಸುತ್ತೆ. ಮುಂದಿನ ಪತ್ರ ಓದು"

"ಸರ್ ಇದು ಹೆ. ಕು. ರತ್ನಯ್ಯ, ಮಾಲೀಕರು ಮಹಾತ್ಮಗಾಂಧಿ ಬಾರ್/ಬೀರ್ ಸೆಂಟರ್‌ನಿಂದ ಬಂದಿರುವುದು. ರಾತ್ರೆಯ ಹೊತ್ತು ಬಾರ್ ಮುಚ್ಚಲು ಸರ್ಕಾರದ ಆದೇಶವಿದೆ. ಆದರೆ ರಾತ್ರೆಯೆ ಆ..ಗ..ದಿ..ದ್ದ..ರೆ.. ಈ ಚಿಂತನೆ ನಮ್ಮ ಬಲು ದಿನದ ಕನಸು...ಇಗೊ..ನಿಮ್ಮ ಪಾದಕ್ಕೊಂದು ಸಲಾಂ.."

"ಇವನ್ಯಾರೊ ಕುಡಿದ ಖುಷಿಯಲ್ಲಿ ಪತ್ರ ಬರೆದಂತಿದೆ. ನೀನು ಓದುವುದನ್ನು ಮುಂದುವರೆಸು.."

"ಸರ್...ಇದು ಬಾಗೇಪಲ್ಲಿಯ ಪ್ರಸಿದ್ಧ ಪ್ರೇಮ ಕವಿ ರಾಮರಾಯರದ್ದು. ಯಾಕೊ ಕೊಂಚ ನೊಂದುಕೊಂಡು ಬರೆದಂತಿದೆ. ನಾವು ಮತ್ತು ನಮ್ಮ ಪರಂಪರೆಯವರು ಇಷ್ಟು ದಿವಸ ನಮ್ಮ ಪ್ರೇಯಸಿಯರನ್ನು ನೆನೆದು ಚಂದ್ರ ಮುಖಿಯ ತೆಕ್ಕೆಯಲ್ಲಿ ತೇಲಾಡುತ್ತಾ ಒಂದಷ್ಟು ಪದ್ಯಗಳನ್ನು ಬರೆದು ಖ್ಯಾತನಾಮರಾಗಿದ್ದೆವು. ಮುಂಬರುವ ದಿನಗಳಲ್ಲಿ ಸದಾಕಾಲ ಸೂರ್ಯ ಮುಖಿಯ ದರ್ಶನವೇ ಅನಿವಾರ್ಯವಾಗಿ, ನಾವು ಇನ್ಮುಂದೆ ಕವನಗಳನ್ನು ರಚಿಸುವುದೆಂತು? ಸೂರ್ಯ ಮುಖಿ ಅರ್ಥಾತ್ ನಮ್ಮ ಹೆಂಡತಿಯರ ಕೆಂಗಣ್ಣಿಗೆ ಈ ಕವನಗಳು ಏನಾದರೂ ಬಿದ್ದು ಸುಟ್ಟು ಬೂದಿಯಾಗುವುದಿಲ್ಲವೆ? ಇರಲಿ, ನಿಮ್ಮ ಚಿಂತನೆಗೊಂದು ಧಿಕ್ಕಾರ..."

"ಆ ನೊಂದ ಕವಿಗೆ ಸಪರೇಟಾಗಿ ನಾವು ಕ್ಷಮೆ ಕೇಳೋಣ.. ಯಾಕೊ ಎಲ್ಲರೂ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವಂತಿದೆ."

"ಸರ್, ಇದು ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ಪದ್ಮಾವತಿಯವರದ್ದು. ವಿಳಾಸ ಹೆಚ್ಚು ಕಮ್ಮಿ ನಮ್ಮ ಮನೆಯದ್ದೇ ಹೋಲುತ್ತೆ. ಈ ಚಿಂತನೆಯ ವಿಚಾರದಲ್ಲಿ ಅವರಿಗೆ ಅತೀವ ಸಂತಸವಾಗಿದೆ. ಇನ್ಮುಂದೆ ಬರೀ ಹಗಲೇ ಇರುವುದು ವಿಶೇಷವಾಗಿ ಮಹಿಳಾ ಮ(ನಿ)ಣಿಗಳಿಗೆ ವರದಾಯಕವಾಗಿದೆ. ಯಾಕೆಂದರೆ ರಾತ್ರಿಯ ಹೊತ್ತು ಸೀರೆಗಳನ್ನು ಖರೀದಿಸುವಾಗ ಬಣ್ಣಗಳೇ ಕಲಸು ಮೇಲೋಗರವಾಗಿ ಕನ್‌ಫ್ಯೂಸ್ ಆಗುತ್ತಿತ್ತು. ಮರು ದಿನ ಎಕ್ಸ್‌ಚೇಂಜು ಮಾಡುವ ಪರಿಪಾಠವೇ ಈಗ ತಪ್ಪುತ್ತೆ, ನಿರಾಳವಾಗುತ್ತೆ...

"ನ್ಯಾಚುರಲಿ ಇದೊಂದು ವಾಸ್ತವ ಸಂಗತಿ" ಎಂದೆನಿಸುತ್ತದೆ.

"ಸರ್ ಇವರ ಪತ್ರ ಇನ್ನೂ ದೀರ್ಘವಿದೆ. ನಾವು ಹೆಂಗಳೆಯರು ರಾತ್ರಿಯ ಹೊತ್ತು ಷಾಪಿಂಗಿಗೆ ಹೊರಡುವಾಗ ಪತಿರಾಯರು ನಮ್ಮ ಜತೆ ಬರಲಿಚ್ಚಿಸದೆ, ಗಾಡಿ ಡ್ರೈವ್ ಮಾಡಲು ಕಷ್ಟ, ಕಣ್ಣಿಗೆ ದೀಪಗಳು ಗ್ಲೇರ್ ಆಗಿ ಆಕ್ಸಿಡೆಂಟ್ ಆಗುತ್ತೆ. ಜತೆಗೆ ಕಳ್ಳಕಾಕರ ಭಯ, ಮನೆ ಲಾಕ್ ಮಾಡುವುದು ಕ್ಷೇಮಕರವಲ್ಲ... ಇತ್ಯಾದಿ ಸಬೂಬುಗಳನ್ನು ಹೇಳಿ ನಮ್ಮನ್ನು ಅವಾಯ್ಡ್ ಮಾಡುತ್ತಿದ್ದರು. ಈಗ ಈ ರೀತಿಯ ಕಳ್ಳಾಟಗಳಿಗೂ ಬ್ರೇಕ್ ಬೀಳುತ್ತೆ. ನಿಮಗೊಂದು ಥ್ಯಾಂಕ್ಸ್..." ಅರೆ! ಇದು ನನ್ನ ಪತ್ನಿ ಪದ್ದಿಯದು. ಸಂಪಾದಕರಿಗೂ ಯಾಕೋ ಅನುಮಾನವಾಗಿ ಕಣ್ತೆರೆದು ನನ್ನನ್ನೇ ದುರುಗುಟ್ಟಿ ನೋಡಹತ್ತಿದರು. ಅಧೀರನಾದ ನಾನು ಮುಂದಿನ ಪತ್ರಕ್ಕೆ ಹೋದೆ.

"ಸರ್ ಈ ಪತ್ರ ಯಾರೊ ಮೋಶಾ ಎನ್ನುವವರು ನವದೆಹಲಿಯಿಂದ ಬರೆದಿದ್ದಾರೆ. ಅದೃಷ್ಟವಶಾತ್ ಕರ್ನಾಟಕದಲ್ಲಿ ಕಮಲವನ್ನೇನೋ ಅರಳಿಸಿದೆವು. ಆದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಬ್ರಹ್ಮಕಮಲವನ್ನು ಅರಳಿಸುವ ನಮ್ಮ ಬಲು ದಿನದ ಕನಸು ಇನ್ನು ಕೇವಲ ಭ್ರಮನಿರಸನವಷ್ಟೆ? ಕಾಶ್ಮೀರದ ಚೇಳಿನ ಕಾಟದಿಂದ ಈಗ ತಾನೆ ಹೊರ ಬಂದಿದ್ದೇವೆ. ದಯವಿಟ್ಟು ಈ ರೀತಿಯ ಹಗಲು ಚಿಂತನೆ ಮಾಡಿ ನಮ್ಮನ್ನು ನಿರಾಶೆಗೊಳಿಸ ಬ್ಯಾಡಿ. ಸರ್ ಇವರ ಅಳಿಲಿನ ಗೂಡಾರ್ಥವೇ ನನಗಾಗುತ್ತಿಲ್ಲ" ಎಂದು ಪೇಚಾಡಿಕೊಂಡೆ. ಸಂಪಾದಕರು ನಸು ನಗೆ ನಕ್ಕರು.

ಬ್ರಹ್ಮಕಮಲ ಅರಳುವುದು ಮಧ್ಯರಾತ್ರಿಗಲ್ಲವೇನಯ್ಯ? ಆದರೆ ನಿನ್ನ ಪ್ರಕಾರ ರಾತ್ರಿಗಳೇ ಬರದಿದ್ದರೆ?

ಈ ಸಮಜಾಯಿಷಿಯಿಂದ ತೃಪ್ತನಾಗಿ ಕೊನೆಯ ಆ ಪತ್ರದ ಮೇಲೆ ಕಣ್ಣಾಡಿಸಿದೆ. ಯಾರೊ ರಾ. ಗಾ. ಎಂಬ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಮಾಜಿ ವಿದ್ಯಾರ್ಥಿ ನವದೆಹಲಿಯಿಂದ ಬರೆದಿದ್ದುದು. "ಮಧ್ಯರಾತ್ರಿ ನಮಗೆ ಸ್ವಾತಂತ್ರ್ಯ ತಂದುಕೊಟ್ಟ ಬ್ರಿಟಿಷರು ಇದುವರೆಗೂ ತಮ್ಮ ಗೌರವಾನ್ವಿತ ಸದಸ್ಯರಿಗೆ ನೈಟ್ ಹುಡ್ ಪ್ರಶಸ್ತಿ ನೀಡಿ ಗೌರವಿಸುತ್ತಿದ್ದರು. ಆದರೆ ಇನ್ಮುಂದೆ ಘನ ಬ್ರಿಟಿಷು ಸರ್ಕಾರ ಪ್ರಶಸ್ತಿಯ ಹೆಸರನ್ನು ಡೇ ಹುಡ್ ಪ್ರಶಸ್ತಿ ಎಂದು ಮಾರ್ಪಾಡು ಮಾಡಿಕೊಳ್ಳಬೇಕಾಗುತ್ತೆ. ಒಟ್ಟಿನಲ್ಲಿ ನಿಮ್ಮ ಹಗಲು ಚಿಂತನೆಯ ಗಾಳಿ ಎಲ್ಲರ ಬದುಕು ಮತ್ತು ರೀತಿ ನೀತಿಗಳನ್ನು ಬದಲಿಸುತ್ತದೆ "

"ಓ ಹೋ ಹೊ. ಯಾರಯ್ಯ ಈ ಪ್ರಭೃತಿ. ಏನು ಇವನ ಸ್ಪೆಲಿಂಗ್ ನಾಲೆಡ್ಜು? ಇವನ ಐ. ಕ್ಯು. ನಿನ್ನ ಐ. ಕ್ಯೂ ಗೆ ಪರ್ಫೆಕ್ಟಾಗಿ ಮ್ಯಾಚ್ ಆಗುತ್ತಿದೆಯಲ್ಲ' ಎಂದರು ಸಂಪಾದಕರು. ಇದೇನು ಅವರ ತೆಗಳಿಕೆಯೊ ಅಥವಾ ಹೊಗಳಿಕೆಯೊ ಎಂದು ತಿಳಿಯದಾದ ನಾನು ದೀರ್ಘ ಮೌನಕ್ಕೆ ಜಾರಿದೆ.

■

---

## ಮಿಸ್ ಮಾಡ್ಕೋತೀನಿ

ನಿಲಾಕಾಶದ ಲಕ್ಷತಾರೆಗಳ ಮಿಣುಕು
ಬೆಳ್ಳಿಮೋಡದಂಚಿನ ಚಂದಿರನ ಇಣುಕು
ಪೂರ್ಣ ಚಂದಿರನ ಸುಂದರ ವದನ
ತಿಂಗಳ ಬೆಳಕಿನ ಸುಗ್ರಾಸ ಭೋಜನ

## ಚಂದಮಾಮ

ಮಗುವಿಗೆ ಬೇಡವಂತೆ ಮಮ್ಮ
ಅಯ್ಯಯ್ಯೋ, ಅದು
ಯಾಕಂತಮ್ಮ?
ಎಲ್ಲ ನನ್ನ ಪ್ರಾರಬ್ಧ ಕರ್ಮ
ಬೇಕೇ ಬೇಕಂತೆ ಚಂದಮಾಮ!

**– ನಂನಾಗ್ರಾಜ್**

# ಇಸ್ಪೀಟಾಟಗಾರರ ಪಾಲಿಗೆ ಶುಕ್ರದೆಸೆ!

● ಶರತ್ ಕಲ್ಕೋಡ್

“ದಿನ ಪೂರ್ತಿ ಹಗಲಾದರೆ ಹೇಗೆ?” ಎಂದು ನನ್ನ ಚಡ್ಡಿ ದೋಸ್ತ್ ಶೇಷನನ್ನು ಕೇಳಿದೆ.

"ಮಾರ್ವಲೆಸ್! ರಿಯಲೀ ಫೆಂಟಾಸ್ಟಿಕ್!" ಅಪ್ಪಿ ಮುದಾಡುತ್ತಾ, "ಈ ಐಡಿಯಾ, ಹೊಳೆದದ್ದಾದ್ರೂ ಹೇಗೆ ಮಾರಾಯ?" ಪ್ರಶ್ನಿಸಿದ ಶೇಷ.

"ಪ್ರಶ್ನೆಗೆ ಮಾತ್ರ ‘ಥಟ್ಟಂತ’ ಉತ್ತರ ಕೊಡು" ಸೀರಿಯಸ್ಸಾಗಿ ನುಡಿದೆ.

“ರಾಜಾ, ರಾಣಿ, ಡೈಮಂಡ್, ಎಕ್ಕ, ಜೋಕರ್ ಬೆನ್ನಿಗೆ ಬಿದ್ದು, ವರ್ಷಾನುಗಟ್ಟಲೆ ರಾತ್ರೀನಾ ಹಗಲು ಮಾಡಿ, ಜೀವನ ಕಳೆದ ನನ್ನಂಥ ಮಂಡಲಾಧೀಶ್ವರರ ಪಾಲಿಗೆ ದಿನ ಪೂರ್ತಿ ಹಗಲೇ ಆದ್ರೆ, ಆಹಾ,,, ಅದಕ್ಕಿಂತ ಬೇರೆ ಭಾಗ್ಯ ಬೇಕೇನಯ್ಯಾ!?

ಇಸ್ಪೀಟಾಟಗಾರರ ಪಾಲಿಗೆ ಶುಕ್ರದೆಸೆ!!

‘ಇಸ್ಪೀಟ್ ಕಲಿ’ಗಳಿಂದ ಇನ್ನಾವ ರೀತಿ ಉತ್ತರ ನಿರೀಕ್ಷಿಸಲು ಸಾಧ್ಯ?

ಶೇಷ, ನಾನು ಒಂದೇ ಊರಲ್ಲಿ ಹುಟ್ಟಿ ಬೆಳೆದೋರು. ಪ್ರೈಮರಿಯಿಂದ ಹೈಸ್ಕೂಲ್ ತನಕ ಒಟ್ಟಿಗೆ ಕಲಿತವರು. ಮುಂದೆ ಬದುಕಿಗಾಗಿ ಕವಲು ದಾರಿ ಹಿಡಿದ ನಾನು, ಬಿ.ಎ, ಎಂ.ಎ, ಅಂತ ಓದಿ, ನೌಕರಿ ಹಿಡಿದು ಊರೂರು ಅಲೆದು ನಿವೃತ್ತನಾದರೆ, ಹೈಸ್ಕೂಲಿಗೆ ಮಂಗಳ ಹಾಡಿದ ಶೇಷ, ಊರಿನಲ್ಲೇ ಬೇರು ಬಿಟ್ಟು, ಕೃಷಿಯಲ್ಲಿ ಸ್ಥಾವರನಾಗಬಹುದಿತ್ತು. ಆದರೆ ಇಸ್ಪೀಟ್ ಮುರಳಿ ಮೋಹಕ್ಕೆ ಮರುಳಾಗಿ "ಇಸ್ಪೀಟ್ ಭಟ್ರು" ಎಂದೇ ಪ್ರಸಿದ್ಧನಾದ. ಇಸ್ಪೀಟಾಟಕ್ಕೆ ನಿವೃತ್ತಿ ಎಂಬುದುಂಟೇ? ಇರುಳನ್ನೇ ಹಗಲು ಮಾಡಿ ದುಡಿಮೆಗೈಯುವ ‘ಅಂಥವರ ಪಾಲಿಗೆ ದಿನ ಪೂರ್ತಿ ಹಗಲೇ ಆದ್ರೆ? ಸ್ವರ್ಗಕ್ಕೆ ಕಿಚ್ಚು ಹಚ್ಚಿದಂತೆ ಅಲ್ವೇ?

ಬಾಲ್ಯದಲ್ಲಿ ಕಂಡ ಮೊದಲ ಇಸ್ಪೀಟಾಟಗಳೆಂದರೆ ವಿಶೇಷ ದಿನಗಳಲ್ಲಿ ಊಟವಾದ ಮೇಲೆ, ಸಂಜೆಗತ್ತಲತನಕ ಹಿರಿಯರು ಆಡುತ್ತಿದ್ದ ಇಪ್ಪತ್ತೆಂಟರಾಟ. ಮುದುರಿದ ಇಸ್ಪೀಟ್ ಪೀಡಿ ಅದೃಷ್ಟವಶಾತ್ ಕೈಗೆ ಸಿಕ್ಕಾಗ ಸಂಭ್ರಮದಿಂದ ನಾವು ಆಡುತ್ತಿದ್ದದ್ದು ಕಪ್ಪೋಕೆಂಪೋ!


ಹೈಸ್ಕೂಲ್ ಮುಗಿಯುವ ಹೊತ್ತಿಗೆ, ಇಪ್ಪತ್ತೆಂಟರಜೊತೆಗೆ ಮೂರೆಲೆ, ರೆಮ್ಮಿ, ಕತ್ತೆ, ದಾಡ್‌ಪೀಡ್ ಮುಂತಾದವು ದಾಳಿಯಿಟ್ಟು, ಸಾಂಕ್ರಮಿಕ ರೋಗವಾಗಿ ಹಬ್ಬಿದವು. ಸೋಮಾರಿಕಟ್ಟೆಯೇ ಇಸ್ಪೀಟ್ ಅಡ್ಡೆಯಾಗಿ, ದುಡ್ಡಿಟ್ಟು ಆಡುವ ಆಟಕ್ಕೆ ಕಳೆಗಟ್ಟಿತು. ರಾತ್ರಿಹಗಲಿನ ಪರಿವೆಯೇಯಿಲ್ಲದ ಆಟಕ್ಕೆ ಹೆಂಡ ಮತ್ತಷ್ಟು ರಂಗೇರಿಸಿತು. ಆಡುವವರಿಗಿಂತ ಹಿಂಬದಿ ನೋಡುತ್ತ, ಪುಕ್ಕಟೆ ಸಲಹೆ-ಸೂಚನೆ ಕೊಡುವ ಕುತೂಹಲಿಗಳ ಪರಿವಾರವೇ ಅಧಿಕ! ಜಗಳ, ಹೊಡೆದಾಟ ಮಾಮೂಲು!!

ಈ ಐತಿಹಾಸಿಕ ಪರ್ವದಲ್ಲೇ ಶೇಷ ಇಸ್ಪೀಟ್ ಅಡ್ಡೆ ಪ್ರವೇಶಿಸಿದ್ದು.ಆಡುವವರ ಹಿಂದೆ ಹಣಕುತ್ತಾ ಆಟೀನ್, ಹಾಸ್, ಡೈಮಂಡ್, ಜೋಕರ್ ಪರಿಚಯಿಸಿ ಕೊಂಡ, ಪೀಡಿ ಮುರಿದು ಕಲೆಸುವುದು ಹೇಗೆ? ಆಟಗಾರರೆದುರು ಬೀಳುವಂತೆ ಎಲೆ ಹೇಗೆ ಒಗಾಯಿಸಬೇಕು? ಎಲೆ ಜೋಡಿಸುವ ಕಲೆ, ಸಿಕ್ವೆನ್ಸ್ ಮಾಡುವ ಬಗೆ, ಜೋಕರ್ ವೈಶಿಷ್ಟ್ಯ, ಶೋ ಆದಾಗ ಸಂಭ್ರಮಿಸುವುದು ಹೇಗೆ? ಯಾವಾಗ ಡ್ರಾಪ್ ಹಾಕಬೇಕು? ಬೇರೆಯವರ ಶೋ ಆದಾಗ ಬುಕ್‌ಅಂತ ಹೇಳಿ ಕಮ್ಮಿಕೌಂಟ್ ಹೇಳಿ, ಮಂಗ ಮಾಡುವುದು ಹೇಗೆ? –ಒಂದೇಎರಡೇ? ನೂರಾರು ಹಿಕ್ಮತ್‌ಗಳನ್ನು ಶೇಷ ಕರತಲಾಮಲಕ ಮಾಡಿಕೊಂಡ. ಮಗ ವಾಸುಗೆ ಸಂಸಾರದ ಜವಾಬ್ದಾರಿ ವಹಿಸಿದ ಮೇಲಂತೂ, ಪ್ರವೃತ್ತಿಯಾಗಿದ್ದ ಇಸ್ಪೀಟ್‌ನ್ನೇ ವೃತ್ತಿಯಾಗಿಸಿಕೊಂಡ!

ಅದೃಷ್ಟ ಕುಲಾಯಿಸುತ್ತಾತೊಡಗಿತು! ಅಕ್ಕಪಕ್ಕದಊರ ಅಡ್ಡೆಗಳಿಂದಲೂ ವಿಶೇಷ ಆಮಂತ್ರಣ ಬರತೊಡಗಿತು. ಬುಕ್ಕ್ ಸ್ಟ್ರೈಕ್ ನೂರು, ಐನೂರು, ಸಾವಿರಗಟ್ಟಲೇಗೇರಿ ಲಕ್ಷದ ಗಡಿ ದಾಟಿತು. ಜೊತೆಗೆ ಕಾರ್ಯಕ್ಷೇತ್ರಗಳೂ ಕೂಡ. ತೀರ್ಥಹಳ್ಳಿ, ಶೃಂಗೇರಿ, ಉಡುಪಿ, ಕುಂದಾಪುರ, ಶಿವಮೊಗ್ಗಾ, ಬೆಂಗಳೂರು ಇತ್ಯಾದಿ. ಜೊತೆಗೆ "ಇಸ್ಪೀಟ್ ಭಟ್ಟರು", "ಅಡ್ಡೇರಾಜ", "ಇಸ್ಪೀಟ್ ಕಿಂಗ್", ಮುಂತಾದ ಬಿರುದುಬಾವಲಿಗಳು!

ಅನಿರೀಕ್ಷತವಾಗಿ ಮೊನ್ನೆ ಭೇಟಿಯಾದ ಶೇಷ, "ಮನೆಯಿಂದ ಪೈಸಾ ತೆಗೆದುಕೊಳ್ಳದೇ ಬೆಂಗಳೂರಿನಲ್ಲೊಂದು ಮನೆ, ಸಿಕ್ಸ್‌ಟಿಫಾರ್ಟಿ ಸೈಟ್, ಶಿವಮೊಗ್ಗಾ ದಲ್ಲಿಎರಡು ಸೈಟ್‌ಎಲ್ಲಾ ಇಸ್ಪೀಟಾಟದಿಂದಲೇ ಮಾಡಿದ್ದು!" ವಿವರಿಸಿ "ಅಷ್ಟೆಲ್ಲಾ ಓದಿದೆಯಲ್ಲಾ ನೀನು? ಎಷ್ಟು ಆಸ್ತಿ ಮಾಡಿದ್ದೀಯೋ?" ಎಂದು ಸವಾಲೆಸೆದ.

ದಿನಪೂರ್ತಿ ಹಗಲೇ ಆದರೆ ಇಸ್ಪೀಟಾಟದ ಶೇಷನ ಅಶ್ವಮೇಧ ಕಟ್ಟಿಹಾಕಲು ಸಾಧ್ಯವೇ! ■



● **ದಂನಆ**

- ✓ ಸೂರ್ಯ ಮುಳುಗಿದಾಗ ಕತ್ತಲು ಎಚ್ಚರಗೊಳ್ಳುತ್ತದೆ, ಕುರುಬ ಕಾಣದಿದ್ದಾಗ ತೋಳ ಕಾಣಿಸಿಕೊಳ್ಳುತ್ತದೆ.
- ✓ ಬಟರ್‌ಫ್ಲೈ ಈಸ್ ದಿ ಪ್ರೂಫ್ ದಟ್ ಯು ಕೆನ್ ಗೊ ತ್ರೂ ಎ ಲಾಟ್ ಆಫ್ ಡಾರ್ಕ್‌ನೆಸ್ ಯೆಟ್ ಬಿಕಂ ಸಂಥಿಂಗ್ ಬ್ಯೂಟಿಫುಲ್.
- ✓ ಲೈಟ್ ಲಾಸ್ಟ್ ಇನ್ ಡಾರ್ಕ್, ಡಾರ್ಕ್ ಡೈಡ್ ಇನ್ ಲೈಟ್. ಬೆಳಕಿದ್ದರೆ ಕತ್ತಲನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲ.
- ✓ ಕತ್ತಲಿನ ಹಿನ್ನೆಲೆ ಇರುವದರಿಂದಲೇ ದಿನ ಹೊಳೆಯುವುದು.
- ✓ ಕತ್ತಲನ್ನು ಶಪಿಸಬೇಡ, ಕ್ಯಾಂಡಲ್ ಹಚ್ಚು
- ✓ ಅವನಿಗೆ ಕತ್ತಲಿನ ಭಯವಿಲ್ಲ ಏಕೆಂದರೆ ಅವನೇ ಕತ್ತಲು.
- ✓ ವಿದ್ಯೆ ಎಂದರೆ ಕತ್ತಲಿನಿಂದ ಬೆಳಕಿಗೆ ಸಾಗುವುದು.
- ✓ ಬೆಳಕಿದ್ದರೆ ಕತ್ತಲನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲ.
- ✓ ಎಲ್ಲರೂ ಚಂದ್ರರೆ, ಕಪ್ಪು ಭಾಗ ಇರುತ್ತದೆ ಆದರೆ ತೋರಿಸುವುದಿಲ್ಲ
- ✓ ನೋಡಿ, ಒಂದು ಸಣ್ಣ ಕ್ಯಾಂಡಲ್ ಕತ್ತಲನ್ನು ಧಿಕ್ಕರಿಸುವುದಲ್ಲದೆ ವ್ಯಾಖ್ಯಾನಿಸುತ್ತದೆ.
- ✓ ನನಗೆ ಬೆಳಕೆಂದರೆ ಪ್ರೀತಿ, ಏಕೆಂದರೆ ಅದು ದಾರಿ ತೋರುತ್ತದೆ; ಕತ್ತಲನ್ನು ಸಹಿಸುವೆ ಏಕೆಂದರೆ ಅದು ನಕ್ಷತ್ರಗಳನ್ನು ತೋರಿಸುತ್ತದೆ.
- ✓ ತುಂಬ ಕತ್ತಲು ಸಾವು ತರಬಹುದು ಆದರೆ ಕೋರೈಸುವ ಬೆಳಕು ಕುರುಡ ಮಾಡಬಹುದು.
- ✓ ಕತ್ತಲಿನಲ್ಲಿ ಚಂದ್ರ ದಾರಿ ತೋರುತ್ತಾನೆ ನಿಜ, ಆದರೆ ಅವನು ಕಾಣಿಸಿಕೊಳ್ಳವುದು ಕತ್ತಲಿದ್ದಾಗ ಮಾತ್ರ.
- ✓ ಡಾರ್ಕ್‌ನೆಸ್ ಕೆನ್ ಎಕ್ಸಿಸ್ಟ ಬೈ ಇಟ್ ಸೆಲ್ಫ್. ಲೈಟ್ ಕೆನಾಟ್.
- ✓ ಅನೇಕರು ಕತ್ತಲಿನಲ್ಲೇ ಇರುತ್ತಾ ನಮಗೇನೂ ಕಾಣುತ್ತಿಲ್ಲ ಎಂದು ದೂರುತ್ತಾರೆ.
- ✓ ಬೆಳಕಿನಲ್ಲಿ ಒಬ್ಬನೇ ಹೋಗುವದಕ್ಕಿಂತ ಕತ್ತಲಿನಲ್ಲಿ ಸ್ನೇಹಿತನೊಡನೆ ಹೋಗುವುದು ವಾಸಿ.
- ✓ ಮೆಬಿ ಯು ಹ್ಯಾವ್ ಟು ನೊ ದಿ ಡಾರ್ಕ್‌ನೆಸ್ ಟು ಅಪ್ರಿಷಿಯೇಟ್ ಲೈಟ್ ಬೆಟರ್

**ಈಗ 'ತುಂತುರು' ಪುಸ್ತಕ ರೂಪದಲ್ಲಿ ಲಭ್ಯ. ಪ್ರತಿಗಳಿಗಾಗಿ ಸಂಪರ್ಕಿಸಿ:**

**ತೇಜು ಪ್ರಕಾಶನ : 9448050463**

ಪುಟ : 136 ಬೆಲೆ : ರೂ. 100/-

ಹಗಲೇ ಎಲ್ಲ, ರಾತ್ರಿ ಇಲ್ಲ

# ಹಗಲೂ ಹಗಲು – ಇರುಳೂ ಹಗಲು

● ಬೇಲೂರು ರಾಮಮೂರ್ತಿ

ಇದ್ದಿದ್ದರೆ ದಿನವೆಲ್ಲಾ ಹಗಲು
ಯಾರಿಗೂ ಇರುತ್ತಿರಲಿಲ್ಲ ದಿಗಿಲು
ಹಗಲಲ್ಲೇ ನಡೆಯುತ್ತಿತ್ತು ಪ್ರೀತಿ
ಅದೊಂಥರ ಪ್ರೀತಿಯ ಮತ್ತೊಂದು ರೀತಿ

ಹಗಲೇ ಇದ್ದಿದ್ದರೆ
ರಾತ್ರಿ, ಕತ್ತಲು, ನಕ್ಷತ್ರ, ಚಂದ್ರ, ಇರುಳು,
ಮುಂತಾದ ಅಕ್ಷರಗಳು
ಉರುಳುತ್ತಿರಲಿಲ್ಲ ಯಾರ ತುಟಿಯಿಂದಲೂ
ಮರೆಯಾಗಿರುತ್ತಿತ್ತು ಪದಕೋಶದಿಂದಲೂ

ಬಹಳ ಕಷ್ಟವಾಗುತ್ತಿತ್ತು
ಹಗಲೇ ಇದ್ದಿದ್ದರೆ
ಪತ್ತೇದಾರಿ ಕಾದಂಬರಿಕಾರರು
ಬರವಣಿಗೆಗೆ ಕೂತಿದ್ದರೆ
ಪೆನ್ನು ಮುಂದಕ್ಕೆ ಹೋಗುತ್ತಿರಲಿಲ್ಲ
ಬರೆಯುವುದಕ್ಕೆ ಏನೂ ಹೊಳೆಯುತ್ತಿರಲಿಲ್ಲ

ರಾತ್ರಿಯೇ ಇಲ್ಲದೇ ಬರೀ ಹಗಲಾಗಿದ್ದರೆ
ಮದುಮಕ್ಕಳಿಗೆ ಬಹಳ ತೊಂದರೆ
ಅವರಿಗೆ ಇರುತ್ತಿರಲಿಲ್ಲ ಮೊದಲ ರಾತ್ರಿ
ಆದರೆ ಮಿಲನವಂತೂ ಖಾತ್ರಿ

ಗೀತರಚನಕಾರರಿಗೆ ಬಹಳ ಗಲಿಬಿಲಿ
ರಾತ್ರಿ, ಕತ್ತಲು, ಇಲ್ಲದ ಗೀತೆ ಬರೆಯಬೇಕು
ದೆವ್ವ ಇಲ್ಲದ ಹಾಡು ಹೊಸೆಯಬೇಕು
ಚಂದ್ರನಿಲ್ಲದ ಬಾನು ಬಣ್ಣಿಸಬೇಕು
ತಾರೆಯಿಲ್ಲದ ಆಗಸ ತರಿಸಬೇಕು
ಆದರೂ ಸೈ ಎನಿಸಿಕೊಳ್ಳಬೇಕು

ರಾತ್ರಿಯಿಲ್ಲದೇ ಬರೀ ಹಗಲೇ ಇದ್ದಿದ್ದರೆ
ಶಿವರಾತ್ರಿಯೇ ಇರುತ್ತಿರಲಿಲ್ಲ
ಜಾವದ ಪೂಜೆಯೂ ಆಗುತ್ತಿರಲಿಲ್ಲ
ಜಾಗರಣೆ ಜಾರಿಹೋಗುತ್ತಿತ್ತು

ಇರುಳಲ್ಲಿ ನಡೆಯುವ ಕೆಲಸ ಹಗಲು
ನಡೆಯುವಂತಿಲ್ಲ ಎಲ್ಲೆಲ್ಲೂ
ಕಳ್ಳಕಾಕರಿಗೆ, ದರೋಡೆಕೋರರಿಗೆ
ಕಷ್ಟ ಬದುಕಿ ಬಾಳಲು
ಪೋಲೀಸರಿಗಂತೂ ಕೆಲಸವೇ ಇಲ್ಲ

ಸಿನಿಮಾ ಪ್ರದರ್ಶನಗಳ ಸಮಯಾಧಾರಿತ
ವರ್ಗೀಕರಣ ಬದಲಾಗುತ್ತಿತ್ತು
ಮುಂಜಾನೆ ಮತ್ತು ರಾತ್ರಿ ಎಂಟರ ನಂತರ
ಡಬ್ಬಲ್ ಛಾರ್ಜು ಎನ್ನುವ ಆಟೋದವರಿಗೆ
ದುಃಸ್ವಪ್ನವಾಗುತ್ತಿತ್ತು

ಹಗಲೆಂದರೆ ಹೆಚ್ಚು ವಿದ್ಯುತ್ ಶಕ್ತಿ ಬೇಕಿಲ್ಲ
ಉತ್ಪಾದನೆಗಿಂತ ಬಳಕೆ ಕಡಿಮೆಯಾಗುತ್ತಿತ್ತಲ್ಲ
ನಮ್ಮಲ್ಲಿ ಉಳಿದಿದ್ದನ್ನು ಬೇರೆ ದೇಶಕ್ಕೆ ಕಳಿಸಲು
ದೇಶವೇ ಸುಭಿಕ್ಷದ ಹೊನಲು

# ಕತ್ತಲಿನಲ್ಲಿ ಉತ್ತರಗಳು

● ಆನಂದ

ಟ್ವೆಂಟಿಫೋರ್ ಅವರ್ಸ್ (ಹವರ್ಸ್ ಅಲ್ಲ) ಬೆಳಕೇ ಇರುತ್ತೆ ಅಂದರೆ ಗೂಬೆ ಏನ್ಮಾಡುತ್ತೆ? ಅಂತ ನನಗೆ ನಾನೇ ಕೇಳ್ಕೊಂಡೆ. ಗೂಬೇನ ಕೇಳೋದಿಕ್ಕೆ ಆಗೋಲ್ಲವಲ್ಲ? ಕೇಳಿದ್ದರೆ ಅದು ಬಹುಶಃ 'ವೈ? ನಾನು ಕೂಲಿಂಗ್ ಗ್ಲಾಸ್ ಹಾಕ್ಕೊಂಡು ಓಡಾಡ್ತೀನಿ' ಅಂತ ಹೇಳಬಹುದು ಅಂತ ನಾನೇ ಊಹಿಸಿಕೊಂಡೆ. ಆದರೆ ಅಂತಹ ಸಮಯದಲ್ಲಿ 'ದಿನ ಯಾವಾಗ ಶುರುವಾಗಿ ಯಾವಾಗ ಮುಗಿಯುತ್ತೆ?' ಅಂತ ಯಾರಾದರು ಕೇಳಿದರೆ ನೊ ಆನ್ಸರ್ ನನ್ನ ಬಳಿ.

ಹಗಲೇ ಯಾವಾಗಲೂ ಎಂದಾಗ 'ಹಗಲಿಗೆ ವಿರುದ್ಧ ಪದ ಇದೆಯೆ ಮಿಸ್?' ಎಂದು ಮಕ್ಕಳು ಗ್ರಾಮರ್ ಕ್ಲಾಸಿನಲ್ಲಿ ಕೇಳಲೂಹುದು. ಈಗ ಗ್ರಾಮರ್ ಯಾರೂ ಹೇಳಿಕೊಡಲ್ಲ ಅಂತ ಗೊಣಗದಿರಿ. ಮಕ್ಕಳು ಅಂದಾಗ ನೆನಪಿಗೆ ಬರುತ್ತೆ. 'ದೀಪ ಹಚ್ಚೋದರೊಳಗೆ ಮನೇಲಿರಬೇಕು' ಎಂಬ ಅಣತಿ. ಆದರೆ ಈಗ ಆ ತಾಕೀತು ಮಾಡೋದಿಕ್ಕೆ ಅವಕಾಶವೇ ಇಲ್ಲದಂತಹ ಪರಿಸ್ಥಿತಿ.

ಸೂರ್ಯ ಮುಳುಗಿ ರೆಸ್ಟ್ ತೊಗೋತಾನೆ ಅಥವಾ ಧಾರಾವಾಹಿ ಭಾಷೆಯಲ್ಲಿ ಹೇಳೊದಾದ್ರೆ 'ರೆಸ್ಟ್ ಮಾಡ್ತಾನೆ' ಎಂಬ ಅವಕಾಶ ಇಲ್ಲದೆ ಅವನು 24ಬೈ7 ಡ್ಯೂಟಿ ಮೇಲೆ ಇರುವಾಗ ಆಗುಂಬೆಗೆ ಯಾರೂ ಹೋಗೋದೇ ಇಲ್ಲ ಸೂರ್ಯಾಸ್ತಮಾನ ನೋಡೋದಿಕ್ಕೆ. ಅದರಂತೆ ಡಾರ್ಜಿಲಿಂಗ್‌ನಲ್ಲಿ ಬೆಳಿಗ್ಗೆ 4ಕ್ಕೇ ಎದ್ದು ಸೂರ್ಯೋದಯ ನೋಡ ಬೇಕಾದ ಅವಶ್ಯಕತೆಯೂ ಉದ್ಭವಿಸದು. ಮಲಗಿದ್ದ ಸೂರ್ಯ ಮತ್ತೆ ಉದಯವಾಗುವುದನ್ನು ನೋಡೋದರಲ್ಲಿ ತಾನೆ ಮಜ ಇರೋದು. ನೊ?

ಹಾಗಿದ್ದರೆ ಪೌರ್ಣಮಿ ಅಮಾವಾಸ್ಯೆಗಳ ಕತೆ ಏನು? ಕ್ಯಾಲೆಂಡಿರನಲ್ಲಿ 15 ದಿನಕ್ಕೊಮ್ಮೆ ಮೂಡುತ್ತಿದ್ದ ಸೊನ್ನೆ ಮತ್ತು ಡಾಟ್‌ಗಳು ಕಾಣಿಸೋದಿಲ್ಲ. ಪೌರ್ಣಿಮೆ ದಿನ ನಗರ ಪ್ರದಕ್ಷಿಣೆ ಕಾರ್ಯಕ್ರಮ ಹಾಕಿಕೊಳ್ಳುತ್ತಿರಲಿಲ್ಲ. ಜೊತೆಗೆ, ಬೆಳದಿಂಗಳೂಟ ಸಹ ಮಿಸ್. ಭೀಮನ ಅಮಾವಾಸ್ಯೆಯೇ ಇಲ್ಲದ ಮೇಲೆ ಗಂಡನ ಪೂಜೆ ಮಾಡಬೇಕೆ? ಗುರು ಪೂರ್ಣಿಮೆ ಗತಿ? ಮಹಾಲಯ ಅಮಾವಾಸ್ಯೆ ಎಂದು ಸರ್? ಎಂಬ ಮೂರೂ ಘನ ಪ್ರಶ್ನೆಗಳಿಗೆ ಉತ್ತರ?

ಮತ್ತೆ ಮೋಹಿನಿಯರು? ಅದೇ ಅಮಾವಾಸ್ಯೆ ದಿನ ಮಾತ್ರ ಅಪಿಯರ್ ಆಗ್ತಾರೆ ಅಂತಾರಲ್ಲ ಅವರು. ಕತ್ತಲಿನಲ್ಲಿ ಕಾಣಿಸಬೇಕಾದರೆ ವೈಟ್ ಡ್ರೆಸ್ ಹಾಕ್ಕೋಬೇಕು. ಆದರೆ ಈಗ? ಅಮಾವಾಸ್ಯೆಯೇ ಇಲ್ಲ ಎಂದ ಮೇಲೆ ಬೇರೆ ಯಾವ ದಿನ? ಯಾವ ಡ್ರೆಸ್? ಡಬಲ್ ಸಮಸ್ಯೆ ಇಡಿ ಮತ್ತು ಐಟಿ ಒಟ್ಟಿಗೇ ತಗಲಾಕಿಕೊಂಡಹಾಗೆ.

ಇಡಿ ಮತ್ತು ಐಟಿ ಅಂದಾಗ ನ್ಯಾಚುರಲ್ಲಾಗಿ ಹಣ ನೆನಪಿಸಿಕೊಳ್ಳಲೇಬೇಕು. ತೆರಿಗೆ ತಪ್ಪಿಸಿ ಕೂಡಿಸಿಡುತ್ತಿದ್ದ ಹಣವನ್ನು ಏನೆಂದು ಕರೆಯುಬೇಕು? ಕತ್ತಲೇ ಇಲ್ಲ ಅಂದಮೇಲೆ ಬ್ಲಾಕ್ ಮನಿ ಎಲ್ಲಿರುತ್ತದೆ. ಇದ್ದರೂ ಅದಕ್ಕೆ ಬೇರೆ ಹೆಸರು ಕೊಡಬೇಕು. ಏನು ಕೊಡ್ತಿರಾ? ಸಜಷನ್ಸ್ ವೆಲ್‌ಕಂ

ರಾತ್ರಿ ಪ್ರಿಂಟಾಗಿ ಬೆಳಿಗ್ಗೆ ಹಂಚಲ್ಪಡುತ್ತಿದ್ದ ದಿನಪತ್ರಿಕೆಗಳ ವಿತರಣೆ ಹೇಗೆ? ಸೆಕೆಂಡ್ ಶೊ ಸಿನಿಮಾದ ಟೈಮಿಂಗ್ಸ್ ಏನು? ವಾಟರ್ ವರ್ಲ್ಡ್, ಐಸ್ ವರ್ಲ್ಡ್ ಮಾದರಿಯಲ್ಲಿ ಕತ್ತಲನ್ನು 'ನೋಡಲು' ಡಾರ್ಕ್ ವರ್ಲ್ಡ್ ಎಂಬ ಶೊ ಇರಬಹುದೆ? ಆದರೆ ಕತ್ತಲನ್ನು ನೋಡೋದು ಹೇಗೆ? ಏನಾದರೂ ಹುಡುಕಬೇಕಾದರೆ ದೀಪ ಹಾಕಿಕೊಂಡು ಹುಡುಕುವಂತೆ ಕತ್ತಲನ್ನು 'ನೋಡಲು' ಏನು ಬೇಕು?

■

## ಮೊದಲಾಗಿ ನೀವೆಲ್ಲಿದ್ದೀರಿ?

● ಶೈಲನ್

ಹಿಂದೆ ಇತ್ತಂತೆ ಬಾನೆಲ್ಲ
ತುಂಬಿ ತುಂಬಿ ತಾರೆ
ಅದನೆನೆಯಲು
ಕಣ್ ತುಂಬ ನೋಡಲು, ನನ್ನ ದನಿಯಲೆ
ಪ್ರೀತಿಯಲಿ ಕರೆದೆ ಬಾರೆ ಬಾರೆ

ಒಮ್ಮೆಯಾದರೂ
ಆ ನನ್ನ ಊಹೆಯ ತಾರೆ
ನನ್ನ ಕರೆಗೆ, ಅನ್ನಲಿಲ್ಲ ಕ್ಯಾರೆ,
ಮಂಡಿಯೂರಿ ಮತ್ತೆ ಮತ್ತೆ
ನವೀಕರಿಸಿದೆ ನನ್ನ ಬೇಡಿಕೆಯ
ಅಹವಾಲು

ನನ್ನ ಕವನದ ಕಲ್ಪನಾ ಲಹರಿಯೋ
ನೀನಿದ್ದರೆ ಇದ್ದಿದ್ದ ಓ ಅಂದಿನ ತಾರೆಯೋ
ನಮಗೇಕೆ ನೀಡೊಲ್ಲೆ,
ಹೊಸ ಭಾವನೆಗಳ, ಉಲ್ಲಾಸ, ಉತ್ಸಾಹ
ಎರಡೂ ಕಾಲದ ಕವಿಗಳು
ಕವಿಗಳೇ ಆದಾಗ
ತರವೇ ನಿನಗೆ
ಈ ತಾರತಮ್ಯ

ನಿಮಿರಿ ನೋಡಿದರೂ ಕತ್ತೆತ್ತಿ
ತಲೆ ಸುತ್ತಿ ಸುತ್ತಿ
ಎಲ್ಲಿ ಅಡಗಿಹದೋ, ತಿಳಿಯದಾಗಿದೆ,
ಮದುಮಗಳಿಗೆ ತೋರಿಪ
''ಅರುಂಧತಿ''
ನಿಮಗೆ ತಿಳಿದಿದ್ದರೆ, ಹೇಳವಿರಾ
''ಸಪ್ತ ಋಷಿಗಳೆ''
ಹೌದು ಮೊದಲಾಗಿ ನೀವೆಲ್ಲಿದ್ದೀರಿ.

# ನಿದ್ದೆ ಕುಲಗೆಟ್ಟು...

● ಗಾಯತ್ರಿ ಮೂರ್ತಿ

ಇದೇನು ಹೀಗೆ ಹೇಳ್ತಿದೀರಾ? ಇರುಳೇ ಇಲ್ಲಾಂದ್ರೆ? ರಾತ್ರಿ ಆಗೋದಿಲ್ವಾ?

ಇಲ್ಲಾ, ಮಾರಾರ್ರೆ, ಖಂಡಿತಾ ರಾತ್ರಿ ಆಗೋದಿಲ್ಲಾ. ಅಂದ್ರೆ, ಅದು ಅವೈಜ್ಞಾನಿಕ ಅಲ್ವಾ?

ಹಾಗ್ಯಾಕಂತೀರಾ? ಇತ್ತೀಚೆಗೆ ನಿತ್ಯಾನಂದ ಸ್ವಾಮಿಗಳು ಇಪ್ಪತ್ತು ನಿಮಿಷಗಳ ಕಾಲ ಸೂರ್ಯೋದಯವನ್ನು ತಡೆದು ನಿಲ್ಲಿಸಿದೆ ಎಂದು ಹೇಳಿದಾಗ, ಅದನ್ನು ನಂಬಿದ ಮೂರ್ಖರಿರೋವಾಗ, ಹೀಗೂ ಯಾಕಾಗಬಾರ್ದು? ಅಂತೀನಿ.ಇರಲಿ, ಒಂದು ವೇಳೆ, ರಾತ್ರಿ ಅನ್ನೋದು ಇಲ್ವೇ ಇಲ್ಲ, ಬರಿ ಹಗಲೇ ಎಲ್ಲಾ, ಅಂತಾದ್ರೆ, ಏನಾದೀತು?

ಅಯ್ಯೋ, ಹಾಗೇನಾದ್ರೂ ಆಯ್ತೂನ್ನೊಳಿ, ನಿದ್ದೆಯಿಲ್ಲದೆ ಪರದಾಡೋ ಜನರ ಸಂಖ್ಯೆ ಸಾವಿರಾರು ಪಟ್ಟು ಜಾಸ್ತಿಯಾಗತ್ತೆ. ನಿದ್ದೆಯೇ ಇಲ್ಲದೆ, ಅವರಿಗೆ ಹುಚ್ಚು ಹಿಡಿದ ಹಾಗಾಗತ್ತೆ, ಆಗೇನಾಗತ್ತೆ? ಇನೇನಾಗತ್ತೆ, ಮನೋವಿಜ್ಞಾನಿಗಳಿಗೆ ಬೇಡಿಕೆ ಹೆಚ್ಚಾಗತ್ತೆ.

ಇದೇನ್ರೀ? ಏನೇನೋ ಹೇಳ್ತೀರಾ ಅಂತೀರಾ? ಖಂಡಿತಾವಾಗ್ಲೂ ಹೇಳ್ತೀನಿ, ಇದು ಸತ್ಯ, ಸತ್ಯ ಸತ್ಯ. ಯಾಕೇಂತೀರಾ? ನೋಡಿ, ನನ್ನಂತಹವಳಿಗೇನೂ ಯೋಚಿಸೋ ಅಗತ್ಯ ಇಲ್ಲಾ. ಯಾಕೇಂದ್ರೆ, ಹಾಡು ಹಗಲೇ ಗಂಟೆಗಟ್ಟಲೆ ನಿದ್ದೆ ಮಾಡೋ ಸೌಭಾಗ್ಯ ನನ್ನದು. ಅಂದರೆ, ಸೂರ್ಯ ಫಳ್ ಅಂತ ಬೆಳಗ್ತಿದ್ರೂ, ಅವನು ನನ್ನ ನಿದ್ದೆಗೇನೂ ಅಡ್ಡ ಬರಲ್ಲ. ಆದರೆ, ಎಲ್ಲರೂ ನನ್ನ ಹಾಗಲ್ಲ, ರಾತ್ರಿ ಮಲಗುವಾಗ ಅವರಿಗೆ ಕಡುಕತ್ತಲಿದ್ದರೆ ಮಾತ್ರ ನಿದ್ದೆ ಬರೋದು. ಪಕ್ಕದ ಕೋಣೇಲಿ ದೀಪ ಉರೀತಿದ್ದು, ತನ್ನ ಕೋಣೆ ಬಾಗಿಲು ಹಾಕಿದ್ರೂ, ಬಾಗಿಲ ಸಂದಿಯಿಂದ ತೂರಿ ಬರೋ ಬೆಳಕೇ ಸಾಕು, ಅವರ ಕಣ್ಣು ಕುಕ್ಕಿ, ನಿದ್ದೆ ಅಪಹರಿಸಲು. ಅಂತಹುದರಲ್ಲಿ, ಇಪ್ಪತ್ನಾಲ್ಕು ಗಂಟೆ, ಮೂನ್ನೂರವತ್ತೈದು ದಿನಗಳು ಸೂರ್ಯ ಫಳಫಳಾಂತ ಬೆಳಗ್ತಾ ನಿಂತ್ರೆ, ಅವರ ನಿದ್ದೆ ಕುಲಗೆಟ್ಟು, ತಲೆ ಕೆಡುವುದರಲ್ಲಿ ಸಂಶಯವೇ ಇಲ್ಲಾ. ತಲೆ ಕೆಟ್ಟರೆ, ಇಗೋ ನಾನಿದೀನಿ ನಿಮ್ಮ ತಲೆ ಸರಿಮಾಡಕ್ಕೇಂತ ಇರೋ ಮನೋವಿಜ್ಞಾನಿಗಳ ಬಳಿ ತಾನೇ ಅವರೆಲ್ಲಾ ಹೋಗ್ಬೇಕು. ಅಂದ್ರೆ, ಅವರಿಗೆ ಬಿಸಿನೆಸ್ ಜಾಸ್ತಿ ಆಗಿ, ಅವರು ಕೋಟ್ಯಾಧಿಪತಿಗಳಾಗೋದರಲ್ಲಿ ಸಂಶಯವೇ ಇಲ್ಲ, ಅಲ್ಲವೇ?

ಕತ್ತಲಲ್ಲಿ ಕಳ್ಳತನದಿಂದ ಭೇಟಿಯಾಗುವ ಪ್ರೇಮಿಗಳು, ರಾತ್ರಿಯಾದ ಕೂಡಲೇ ಕತ್ತಲಲ್ಲಿ ತಮ್ಮ ಕೈಚಳಕ ತೋರಿಸೋ ಕಳ್ಳರು, ದರೋಡೆಕೋರರು, ಹಗಲಲ್ಲಿ ದುಡಿದು, ರಾತ್ರಿಯಾದ ಕೂಡಲೇ, ಮದ್ಯ ಸೇವಿಸಿ ಅದರಲ್ಲೇ ಸ್ವರ್ಗ ಕಾಣುವವರು, ಇವರ ಗತಿಯೆಲ್ಲಾ ಏನು? ಜಗಮಗಿಸೋ ದೀಪಾಲಂಕಾರದಿಂದ

ಮೆರೆಯುವ ಪಬ್‌ಗಳು, ಇನ್ನೂ ಹಲವಾರು ಬಗೆಯ ರಾತ್ರಿ ವ್ಯಾಪಾರ, ವ್ಯವಹಾರಗಳೆಲ್ಲಾ ಏನಪ್ಪಾ ಗತಿ? ಗೋವಿಂದಾ, ಗೋವಿಂದಾ! ಅಷ್ಟೇ ಅಲ್ಲ, ರಾತ್ರಿ ಕಳ್ಳಮಾಲು ಸಾಗಾಣಿಕೆಯಲ್ಲಿ ತೊಡಗಿದವರು, ಬೀಗ ಹಾಕಿದ ಮನೆಗಳಿಗೆ ಕನ್ನ ಹಾಕುವವರು, ಗಾಳಿಗಾಗಿ ಕಿಟಕಿ ಬಾಗಿಲು ತೆರೆದು ಮಲಗಿದ ಬಡಪಾಯಿಗಳ ಕುತ್ತಿಗೆಗೆ ಕೊಕ್ಕೆ ಹಾಕಿ ಸರ ಕದಿಯುವವರು, ಇಲ್ಲವೇ ಕೈಗೆ ಸಿಕ್ಕಿದ್ದನ್ನು ಕದ್ದೊಯ್ಯುವವರ ಕುಲಕಸುಬು ನಡೆಯುವುದಾದರೂ ಹೇಗೆ ಮಾರಾರ್‍ರೇ? ಹಾಂ, ಮತ್ತೊಂದುಬಹುಮುಖ್ಯವಾದ ವಿಷಯ, ನಸುಕಿನಲ್ಲಿ ಅತ್ಯಂತ ಭಕ್ತಿಯಿಂದ ಭಗವಂತನ ಸ್ತೋತ್ರಗಳನ್ನು ಪಠಿಸುತ್ತಾ, ಮನೆಮನೆಗಳ ಕಾಂಪೌಂಡ್ ಒಳಗೆ ಮೆಲ್ಲಗೆ ನುಗ್ಗಿಯೋ, ಇಲ್ಲವೇ ವಾಕಿಂಗ್ ಸ್ಟಿಕ್ ಸಹಾಯದಿಂದಲೋ ಹೂಗಳನ್ನು ಕದ್ದು ಪೂಜೆ ಮಾಡಿ ಕೃತಾರ್ಥರಾಗುವ ಭಕ್ತಾದಿಗಳ ಗತಿಯೇನು? ಶಿವಶಿವಾ! ಇಂತಹವುಗಳಿಗೆಲ್ಲಾ ಕತ್ತಲೇ ಅತ್ಯಂತ ಪ್ರಶಸ್ತವಲ್ಲವೇ? ಜೊತೆಗೆ, ನೈಟ್ ಶಿಫ್ಟ್ ಮಾಡಿ, ರಾತ್ರಿಯೆಲ್ಲಾ ನಿದ್ದೆಗೆಟ್ಟು ಕೆಲಸ ಮಾಡಿ, ಡಬಲ್ ಪೇಮೆಂಟ್ ತೊಗೊಂಡು ಸಾಮಸಾ ತೂಗಿಸೋ ಅಂತಹ ಕಾರ್ಮಿಕರ ಗತಿಯೇನು?

ಹಗಲು–ರಾತ್ರಿ, ಕಪ್ಪು–ಬಿಳುಪು, ಸಿಹಿ–ಕಹಿ, ಸುಖ–ದುಃಖ, ಹೀಗೆ ವೈರುಧ್ಯಗಳಿದ್ದರೆ, ಜೀವನ ಸೊಗಸು. ಇಲ್ಲವಾದರೆ, ಒಂದು ರೀತಿಯ ಏಕತಾನತೆಯಿಂದ ಜೀವನ ನೀರಸವಾಗಿ ಜನ ಬೇಸತ್ತು ಹೋಗ್ತಾರೆ.

ಈ ಸಂದರ್ಭದಲ್ಲಿ ನನಗೆ ತೆನಾಲಿ ರಾಮನ ಕತೆ ನೆನಪಿಗೆ ಬರುತ್ತಿದೆ. ಒಮ್ಮೆ ಕೃಷ್ಣದೇವರಾಯರು ಮಾತಿನ ಲಹರಿಯಲ್ಲಿ, 'ಬರೀ ಹಗಲೇ ಇರುವಂತಾಗಿ, ರಾತ್ರಿಯಾಗದೇ ಇದ್ದರೆ ಏನಾಗತ್ತೆ?' ಎಂದು ಸಭಿಕರನ್ನು ಕೇಳಿದರಂತೆ. ಎಂದಿನಂತೆ, ಒಬ್ಬೊಬ್ಬರು ಒಂದೊಂದು ರೀತಿ ಉತ್ತರವಿತ್ತರು. ಇವ್ಯಾವುದೂ ರಾಯರಿಗೆ ಸಮಾಧಾನ ತರಲಿಲ್ಲ. ಸರಿ, ಅವರ ದೃಷ್ಟಿ ತೆನಾಲಿ ರಾಮನತ್ತ ಹರಿಯಿತು. ತೆನಾಲಿಗೆ ಅರ್ಥವಾಯಿತು. 'ಆಯಿತು ಮಹಾಸ್ವಾಮಿ, ಇದಕ್ಕೆ ಉತ್ತರ ನಾನು ಕೊಡ್ತೀನಿ. ನನಗೆ ಒಂದು ಗಂಟೆ ಹೊರಗೆ ಹೋಗಲು ಅನುಮತಿ ನೀಡಿ,' ಎಂದನಂತೆ.


ಅಂತೆಯೇ ತೆನಾಲಿ ಸೀದಾ ಮಹಾರಾಜರ ಅಡುಗೆ ಮನೆಗೆ ಹೋಗಿ, ಅಲ್ಲಿ ರಾಯರಿಗೆ ಇಂದು ಬಗೆಬಗೆಯ ಸಿಹಿ ತಿಂಡಿಗಳನ್ನು ಮಾತ್ರವೆ ಬಡಿಸಿ, ಬೇರೆಯದನ್ನು ಬಚ್ಚಿಟ್ಟಿರಿ, ನಾನು ಹೇಳಿದಾಗ ಮಾತ್ರವೇ ಅದನ್ನು ಬಡಿಸಿ,' ಎಂದು ಆಣತಿಯಿತ್ತನು.

ಸರಿ, ಕೃಷ್ಣದೇವರಾಯರ ಊಟದ ಸಮಯ. ಬಂದು ನೋಡುತ್ತಾರೆ, ಬಗೆಬಗೆಯ ಸಿಹಿ ತಿಂಡಿಗಳನ್ನು ಅಡುಗೆಯವರು ಊಟದ ಟೇಬಲ್ ಮೇಲೆ ಜೋಡಿಸಿದ್ದಾರೆ! ರಾಯರಿಗೆ ಸಿಹಿಯೆಂದರೆ ಪಂಚಪ್ರಾಣ. ಸರಿ, ಊಟಕ್ಕೆ ಕುಳಿತು ಮೂರ್‍ನಾಲ್ಕು ಬಗೆಯ ಸಿಹಿ ತಿಂಡಿ ತಿಂದರು. ಅಷ್ಟರಲ್ಲಿ ಬಾಯಿ ರುಚಿ ಕೆಟ್ಟಂತಾಗಿ, ನಾಲಿಗೆ ಖಾರವನ್ನು ಬಯಸಿತು. ಬಾಣಸಿಗನಿಗೆ ಖಾರ ಬಡಿಸಲು ಹೇಳಿದರು. ಆದರೆ ಅವನು ಜಗ್ಗಲಿಲ್ಲ. ರಾಯರಿಗೆ ತಕ್ಷಣವೇ ಇದು ತೆನಾಲಿಯ ಕರಾಮತ್ತು ಎಂದು ಅರ್ಥವಾಯಿತು.

'ತೆನಾಲಿ ರಾಮ, ಎಲ್ಲಿ ಅಡಗಿದೀಯ? ಬರೋಣವಾಗಲಿ,' ಎಂದರು ನಗುತ್ತಾ.

ತೆನಾಲಿ ರಾಮ ರಾಯರ ಮುಂದೆ ಬಂದು ನಿಂತು, 'ಮಹಾಸ್ವಾಮಿ, ಕ್ಷಮಿಸಬೇಕು,' ಎಂದ. 'ಛೆ, ಕ್ಷಮಿಸುವಂತಹ ತಪ್ಪು ನೀನು ಮಾಡಿಲ್ಲ. ನಿನ್ನುದ್ದೇಶ ಸಫಲವಾಗಿದೆ. ಅತಿಯಾದರೆ ಅಮೃತವೂ ವಿಷ ಅಂತಾರೆ. ಬರೀ ಹಗಲೇ ಇದ್ದರೆ ರಾತ್ರಿಯಲ್ಲಿ ನಿದ್ದೆಯಿಂದ ಮೈಮನಗಳ ದಣಿವು ನಿವಾರಿಸಿ, ಬೆಳಗಿನ ವೇಳೆಗೆ ಮತ್ತೆ ಚೈತನ್ಯ ಮೂಡಿಸುವ ಕತ್ತಲಿರುವುದಿಲ್ಲ. ಮನುಷ್ಯನಿಗೆ ಹಗಲು ಹೇಗೆ ಮುಖ್ಯವೋ ಹಾಗೆಯೇ ಇರುಳು ಕೂಡ ಮುಖ್ಯ, ನಿನ್ನ ಉದ್ದೇಶ ನನಗೆ ತಿಳಿಯಿತು. ನನಗೆ ಉತ್ತರ ಸಿಕ್ಕಿ ತು, ಶಹಭಾಶ್,' ಎಂದರು.

ಅಷ್ಟೇ ಅಲ್ಲ ಮಹಾಸ್ವಾಮಿ, ಬರಿಯ ಹಗಲೇ ಆದರೆ ದಿನದ ಆರಂಭ ಅಂತ್ಯ ತಿಳಿಯುವುದಿಲ್ಲ. ಯಾವಾಗ ಕೆಲಸ ಮಾಡಬೇಕು, ಯಾವಾಗ ವಿಶ್ರಾಂತಿ ಪಡೆಯಬೇಕು ಅರ್ಥವಾಗುವುದಿಲ್ಲ. ದಿನ, ವಾರ, ಮಾಸ, ವರ್ಷ ಇವುಗಳ ಎಣಿಕೆ ಕಷ್ಟಕರವಾಗುತ್ತದೆ. ಮತ್ತೊಂದು ವಿಷಯ, ಹಗಲೆಲ್ಲಾ ಮೈಮುರಿಯುವಂತೆ ದುಡಿದು, ರಾತ್ರಿಯಾದಾಗ ಹಾಸಿಗೆಗೆ ಮೈಚಾಚಿ ಮಲಗಿ ನಿದ್ರಿಸುವುದಿದೆಯಲ್ಲಾ, ಅದು ಮನುಷ್ಯನಿಗೆ ಅತ್ಯಂತ ಮುದನೀಡುವ, ಚೈತನ್ಯ ನೀಡುವ ಅನುಭವ. ಅದಕ್ಕೆ ಅರ್ಥವೇ ಇಲ್ಲವಾಗುತ್ತದೆ. ನಿಮ್ಮ ಪ್ರಶ್ನೆಗೆ ಇನ್ನೂ ಅನೇಕ ರೀತಿಯಲ್ಲಿ ಉತ್ತರಿಸಲು ಸಾಧ್ಯ. ಆದರೀಗ ನೀವು ಹಸಿದು ಬಂದಿದ್ದೀರಿ. ಊಟ ಸ್ವೀಕರಿಸಿ ಮಹಾಸ್ವಾಮಿ,' ಎಂದು ತೆನಾಲಿ ಹೇಳಿ, ಬಾಣಸಿಗನಿಗೆ ರಾಯರಿಗೆ ಅವರು ಬಯಸಿದ ಊಟ ನೀಡಲು ಸಂಜ್ಞೆ ಮಾಡಿದ. ಬಾಣಸಿಗ ಕಾರ್ಯ ಪ್ರವೃತ್ತನಾದ. ರಾಯರು ಪ್ರಶ್ನೆಗೆ ತಕ್ಕ ಉತ್ತರ ನೀಡಿದತೆನಾಲಿಗೆ ಸೂಕ್ತ ಬಹುಮಾನ ನೀಡಿ ಸನ್ಮಾನಿಸಿದರು. ■



ಹಗಲೇ ಎಲ್ಲ, ರಾತ್ರಿ ಇಲ್ಲ

# ಬಳುಕುವ ಬಳ್ಳಿಗಳಾಗಿರಬಹುದಿತ್ತು

● ಅನಿತಾ ನರೇಶ್ ಮಂಚಿ.

ನಾರ್ವೆ ದೇಶದಲ್ಲಿ ಆರು ತಿಂಗಳಿಡೀ ಹಗಲು. ಮತ್ತಾರು ತಿಂಗಳು ಕತ್ತಲೆಯಂತೆ... ನಮ್ಮ ದೈನಂದಿನ ಕ್ರಿಯೆಗಳು ತಮ್ಮದೇ ಆದ ಜೈವಿಕ ಗಡಿಯಾರವನ್ನು ದೇಹದೊಳಗೇ ಇಟ್ಟುಕೊಂಡಿರುವುದರಿಂದ ಕೆಲಸ ಕಾರ್ಯಗಳಿಗೇನೂ ತೊಂದರೆಯಾಗದು. ಆದರೆ ಇಪ್ಪತ್ನಾಲ್ಕು ಘಂಟೆಯೂ ಹಗಲೇ ಆಗಿ, ಇರುಳಿರದೇ ಇದ್ದಿದ್ದರೇ..ರೇ..!!

ಕತ್ತಲೆಯೇ ಇಲ್ಲದಿದ್ದರೆ ಮನುಷ್ಯ ಬೆಂಕಿ ಕಂಡು ಹಿಡಿಯುತ್ತಲೇ ಇರಲಿಲ್ಲ. ಬೆಂಕಿ ಇಲ್ಲದಿದ್ದರೆ ನಾವೀಗ ಬೇಯಿಸಿ ತಿನ್ನುವ ರುಚಿಕಟ್ಟಾದ ಆಹಾರಗಳೆಲ್ಲಾ ಹಸಿ ಹಸಿಯಾಗಿ ರುಚಿಕೆಟ್ಟು ನಮ್ಮ ಹೊಟ್ಟೆಗಿಳಿಯದೇ ನಾವು ಕೃಶಕಾಯರಾಗಿ ಡಯಟ್ಟು ಮಾಡುವ ಪ್ರಮೇಯವೇ ಬರುತ್ತಿರಲಿಲ್ಲ. ಮಹಿಳೆಯರೆಲ್ಲರೂ ಮಿಸ್ ಇಂಡಿಯಾ ಮಿಸ್ ವರ್ಲ್ಡುಗಳಂತೆ ಬಳುಕುವ ಬಳ್ಳಿಗಳಾಗಿರಬಹುದಿತ್ತು.

ಥಾಮಸ್ ಎಡಿಸನ್ ಲೋಕಕ್ಕೆಲ್ಲಾ ಬೆಳಕು ನೀಡುವ ಬಲ್ಬ್ ಕಂಡು ಹಿಡಿಯುವ ಪ್ರಮೇಯವೇ ಬಾರದೇ ತನ್ನ ಮನೆಯ ಸನ್ ಆಗಿಯೇ ಉಳಿಯಬೇಕಿತ್ತು.

ಸೈಕಲ್ಲಿನಲ್ಲಿ ಇಲ್ಲದ ಡೈನಾಮೋಗೋಸ್ಕರ ಹಳೇ ಕಾಲದ ಪೋಲಿಸಪ್ಪಗಳು ದುಡ್ಡು ಪೀಕುವಂತಿರಲಿಲ್ಲ. ಮಾತ್ರವಲ್ಲದೇ ಮಕ್ಕಳಾದಿಯಾಗಿ ಇಷ್ಟ ಪಡುವ ಟಾರ್ಚು ಲೈಟೆಂಬ ಮಾಯಾದೀಪ ಕಾಣಿಸಿಕೊಳ್ಳುತ್ತಿರಲಿಲ್ಲ. ಈಗಿನ ಆಧುನಿಕ ವಾಹನಗಳಲ್ಲೂ ಹೆಡ್ ಲೈಟೆಂಬ ಸಾಧನ ಇಲ್ಲದೇ, ಅದನ್ನು ರಿಪೇರಿ ಮಾಡುವ ಹೆಡ್ಡೇಕು ಇರುತ್ತಿರಲಿಲ್ಲ. ಎದುರಿನವನ ಕಣ್ಣು ಮುಚ್ಚುವಂತೆ ಲೈಟ್ ಹಾಕುವ ಕೆಲಸವೂ ಉಳಿದು ಜಗಳ ಮಾಡಲು ಬೇರೆ ಕಾರಣ ಹುಡುಕಬೇಕಿತ್ತು. ಸಂಜೆಯಾಗುತ್ತಿದ್ದಂತೆ ಡಬ್ಬಲ್ ಚಾರ್ಜ್ ಮಾಡುವ ಆಟೋವಾಲಾಗಳು ಹ್ಯಾಪು ಮೋರೆ ಹಾಕಬೇಕಿತ್ತು. ರಸ್ತೆಯ ಬದಿಯಲ್ಲಿ ಲೈಟು ಕಂಬಗಳೇ ಇಲ್ಲದೇ ಶ್ವಾನ ಪಡೆ ಕಾಲೆತ್ತಲು ಬೇರೆ ಜಾಗ ಅರಸುತ್ತಾ ಅಲೆಯಬೇಕಿತ್ತು.

ಬುವಿಗೆ ಚಂದ್ರ, ನಕ್ಷತ್ರಾದಿಗಳ ಪರಿಚಯವೇ ಇಲ್ಲದೇ ಹೋಗಿ ಮೊನ್ನೆ ಮೊನ್ನೆ ನಡೆದ ಚಂದ್ರಯಾನವೂ ನಡೆಯುತ್ತಿರಲಿಲ್ಲ. ಕವಿಗಳು ಚಂದ್ರಮುಖಿ ಎಂದು ಪ್ರಿಯೆಯನ್ನು ವರ್ಣಿಸುವ ಪದವನ್ನು ಕಳೆದುಕೊಂಡು ರೊಮ್ಯಾಂಟಿಕ್ ಆಗುವ ಪದವಿಯನ್ನೂ ಕಳೆದುಕೊಳ್ಳುತ್ತಿದ್ದರು. 'ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ ಸುಳಿದಾಡಬೇಡ ಗೆಳತೀ' ಎಂದು ಗೆಳತಿಯ ಸುಕೋಮಲ ಕಾಯವನ್ನು ವರ್ಣಿಸುವಂತೆಯೇ ಇರಲಿಲ್ಲ. ಇದೆಲ್ಲಕ್ಕೂ ಕಲಶವಿಟ್ಟಂತೆ ಮದುವೆಯಾದ ಯಾವ ಗಂಡು ಹೆಣ್ಣೂ ಮೊದಲ ರಾತ್ರಿಯನ್ನು ಆಚರಿಸಿಕೊಳ್ಳುವಂತಿರಲಿಲ್ಲ. ರಾತ್ರಿಯೇ ಇಲ್ಲದ ಮೇಲೆ ಮೊದಲೆಲ್ಲಿ ಕೊನೆಯೆಲ್ಲಿ?

ಇದಿಷ್ಟು ಹುಲುಮಾನವರ ಚಿಂತೆಯಾದರೆ, ಕತ್ತಲಿಲ್ಲದೇ ದೆವ್ವ ಪಿಶಾಚಿಗಳಿಗೆ ವಾಸಸ್ಥಾನವೇ ಇರುತ್ತಿರಲಿಲ್ಲ. ಪಾಪ ಅವುಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡು ಹಗಲೇ ಹೆದರಿಸಲು ಚಿತ್ರ ವಿಚಿತ್ರ ಪ್ರಯತ್ನಗಳನ್ನು ಮಾಡಬೇಕಿತ್ತೇನೋ?

ಬದುಕು ಸರಾಗವಾಗಬೇಕಾದರೆ ಸುಖಕ್ಕೆ ಪಾಲಿದ್ದಷ್ಟೇ ದುಃಖಕ್ಕೂ ಬೇಕು. ಹಗಲಿಗಿದ್ದಂತೆ ರಾತ್ರೆಗೂ...

■

# ಎಡಿಸನ್ ಬಲ್ಬ್ ಬೇಕಾಗಿರಲಿಲ್ಲ

● ಪ್ರಕಾಶ್ ಆರ್

❖ ಚಂದ ಮಾಮ ತೋರಿಸಿ ಊಟ ಮಾಡಿಸುವುದು ಇರುತ್ತಿರಲಿಲ್ಲ

❖ ಗೊಗ್ಗಯ್ಯ ಬರ್ತಾನೆ ಅಂತ ಹೇಳುವುದು ಇರುತ್ತಿರಲಿಲ್ಲ

❖ ಆಟ ಮುಗಿಸಿ ಕತ್ತಲೆಗೆ ಮುಂಚೆ ಬಂದು ಬಿಡು ಅಂತ ಹೇಳುವುದು ಇರುತ್ತಿರಲಿಲ್ಲ

❖ ಎಡಿಸನ್ ಇಂದ ಲೈಟ್ ಬಲ್ಬ್ ಅವಿಷ್ಕಾರವೇ ಇರುತ್ತಿರಲಿಲ್ಲ

❖ ಬೆಳಕಿಗೆ ಸಂಬಂಧಪಟ್ಟ ಸಾಕಷ್ಟು ವಿಷಯಗಳು, ಭ್ರಮಣೆಯಾಗಲಿ ಪರಿಭ್ರಮಣೆಯಾಗಲೀ, ಇತ್ಯಾದಿ ಓದುವುದೇ ಇರುತ್ತಿರಲಿಲ್ಲ

❖ ಸಾಯಂಕಾಲದ ದೀಪ ಹಚ್ಚುವುದಾಗಲಿ, ಲೈಟ್ ಆನ್ ಮಾಡುವುದಾಗಲಿ ಇರುತ್ತಿರಲಿಲ್ಲ

❖ ನೈಟ್ ಶಿಫ್ಟ್, ನೈಟ್ ಲೈಫ್, ಸಾಟರ್ಡೆ ನೈಟ್ ಪಾರ್ಟಿ ಇರುತ್ತಿರಲಿಲ್ಲ ನೈಟಿ, ಫಸ್ಟ್ ನೈಟ್, ನೈಟ್ ಲ್ಯಾಂಪ್ ಇರುತ್ತಿರಲಿಲ್ಲ

❖ ಕತ್ತಲಲ್ಲಿ ಬರುವ ಭೂತಗಳೇ ಇರುತ್ತಿರಲಿಲ್ಲ

❖ ಶುಭೋದಯವಾಗಲಿ, ಶುಭ ರಾತ್ರಿಯಾಗಲಿ ಇರುತ್ತಿರಲಿಲ್ಲ, ಆದರೂ ಭಾರತದ ಜನಸಂಖ್ಯೆ ಕಮ್ಮಿ ಇರುತಿತ್ತೋ, ಗೊತ್ತಿಲ್ಲ!

❖ ವೈಜ್ಞಾನಿಕವಾಗಿ ಹೇಳಬೇಕು ಅಂದರೆ ನಾವು ನೀವು ಜೀವಿಗಳೇ ಇರುತ್ತಿರಲಿಲ್ಲ

**ಇರುತ್ತಿರಲಿಲ್ಲದರ ಪರಿ ಇದಾದರೆ, ಇರುವುದ ನೋಡೋಣ**

❖ ಕತ್ತಲು ಸೃಷ್ಟಿಸುವುದೇ ಒಂದು ದೊಡ್ಡ ವ್ಯಾಪಾರ ಆಗುತಿತ್ತೇನೋ

❖ ಕತ್ತಲೆ ಕೋಣೆ ಸೃಷ್ಟಿಸುವುದು, ಕಣ್ಣಿಗೆ ಮಾಸ್ಕ್ ಇತ್ಯಾದಿ

● ನಂನಾಗ್ರಾಜ್

## ಹೆಚ್ಚುವರಿ ಕೆಲಸ

ದಿನವಿಡೀ ಆಗಿತ್ತು ಹಗಲು
ಬಿಡಲಾರದಿತ್ತು ಕೆಲಸ ಹೆಗಲು
ಇಲ್ಲವಾಗಿತ್ತು ಸುಂದರ ಸಾಯಂಕಾಲ
ಸವೆದಿತ್ತು ಕಡತಗಳೊನೆ ಕಾಲ!

## ಎಲ್ಲಿ ಆ ಶೃಂಗಾರ?

ಜೋಪಾನ ರಾತ್ರಿ ಆತು
ಜಾಗರಣೆ ಖಾತ್ರಿ ಆತು
ಇನ್ನೆಲ್ಲಿ ಆ ಶೃಂಗಾರ ಗೀತೆ?
ವ್ಯಥೆ ಆಗುವುದು ತಾನೆ ಮತ್ತೆ?

## ಹೆಣ್ಣು ಮಕ್ಕಳು/ಯಜಮಾನರು

ಕತ್ತಲೊಳಗೆ ಬಾರದಿರುವ ಚಿಂತೆ
ಬೆದರು ಅಮ್ಮಂದಿರಿಗೆ ಇನ್ನಿಲ್ಲವಂತೆ
ಯಜಮಾನರ ಬೋರೆಗಳು ಇನ್ನಿಲ್ಲ
ಬೀದಿಯ ಲೈಟ್ ಕಂಬಗಳ ಇಲ್ಲವಲ್ಲ!

## ಇನ್ನಿಲ್ಲ


ಪಾರ್ಕಿನ ಮಂದ ಬೆಳಕಲ್ಲಿ
ಗಿಡ ಪೊದೆಗಳ ನಡುವಲ್ಲಿ
ಆಗಿತ್ತು ಪ್ರಣಯಿಗಳ ಮೈಪುಳಕ
ಹಾಗು ಸಾಗಿತ್ತು ಲಘು ಕೈಚಳಕ!

## ಸರಾಸರಿ

ಹಗಲು ದರೋಡೆ ಹೊಸತೇನಲ್ಲ
ಇನ್ನು ನಡೆಯುವುದು ದಿನವೆಲ್ಲ
ರಾತ್ರಿ ದರೋಡೆ ಕುಸಿಯ ಬಹುದು, ಸರಿ
ಆದರೆ ಬದಲಾಗುವುದಿಲ್ಲ ಸರಾಸರಿ!

# ಕತ್ತಲಿಲ್ಲದ ಪದಬಂಧ

● ರಾಮನಾಥ್




ಎಡದಿಂದ ಬಲಕ್ಕೆ:

1. ಜೂಜಿನಲ್ಲಿ ಒಡ್ಡಿದ್ದು ಹಣವೇನು?
3. ಕತ್ತಲೆ ಒಪ್ಪೆ ಎನ್ನುತ್ತಾನೆ ಈ ಸರಸಿ
5. ಕತ್ತಲಿಲ್ಲವೆಂದರೆ ಇಂಗ್ಲಿಷರ ಮಧುಚಂದ್ರವೂ ಇಲ್ಲವಾದೀತು
6. ಅಲ್ಲೋಲಕಲ್ಲೋಲಗೊಂಡ ಸಮುದ್ರ
8. ಕೊನೆಯಲ್ಲಿ ಪೂರ್ಣಗೊಂಡ ಅತ್ಯಾಚಾರ
9. ಡಿಕಾವು ಕಳೆದುಕೊಂಡ ಡ್ರಾಫ್ಟ್ ನೀರಿನಲ್ಲಿ ತೇಲಲು ಅನುಕೂಲವಂತೆ ಬ್ರಿಟಿಷರಿಗೆ
10. ಸೂರ್ಯನ ಹೊಡೆತದಿಂದ ಆದ ಹೊಡೆತಕ್ಕೆ ಬಕಾರದ ಬದಲು ವಕಾರ ವಕ್ಕರಿಸಿದೆ.
13. ಕತ್ತಲೆಯಲ್ಲಿ ಕುಡುಕರಿಗೆ ಇದಿದ್ದರೆ ಘಮ್
14. ಬೆಳಕೇ ಹೆಚ್ಚಿದ್ದರೆ ಎಲ್ಲೆಲ್ಲೂ ಇದನ್ನು ಕೆಳಕ್ಕೆ ಬಿಡಲೇಬೇಕು
15. ಸ್ವಂತದ್ದು ಇಂಗ್ಲಿಷ್‌ನಲ್ಲಿ
16. ಮಧ್ಯದಲ್ಲಿ ದೀರ್ಘವಾಗಿರುವ ರಂಗಮಂಚ
17. ಮೇಲಿನಿಂದ ಕೆಳಕ್ಕೆ 4ರಲ್ಲಿ ಬಂದವನ ಗುಂಪು ಕೊನೆಯಲ್ಲಿ ಕಟ್ ಆಗಿದೆ.
18. ಸೂರ್ಯನಿಗೊಂದು ಪರದೆಯ ಸರಬರಾಜನ್ನು ಮಗ ಹೊತ್ತು ತಂದಿದ್ದಾನೆ.

ಮೇಲಿನಿಂದ ಕೆಳಕ್ಕೆ:

1. ಮಧ್ಯದಲ್ಲಿ ದೀರ್ಘತೆ ಹೊಂದಿರುವ ಕಾವಲುಗಾರ
2. ನುರಿತವನು ಇಲ್ಲಿ ಅಸ್ತವ್ಯಸ್ತವಾಗಿದ್ದಾನೆ
3. ಚಂದ್ರನೇ ಇಲ್ಲದಿದ್ದರೆ ಮೂನ್ ಮೂನ್ ಸೇನ್ ಹೆಸರು ಹೀಗೆ ಸಂಪೂರ್ಣ ವಿರುದ್ಧಕ್ಕೆ ತಿರುಗುತ್ತದೆ
4. 64 ವಿದ್ಯೆಗಳಲ್ಲಿ ಇದೂ ಒಂದು
6. ಮಧ್ಯೆ ತುಂಡಾಗಿರುವ ದೀಪ ಬೆಳಗಿಸುವ ರಾಗ ತಲೆಕೆಳಗಾಗಿದೆ
7. ಅಮೇರಿಕದ ಬೆಳಗಿಗೆ ಸರಿಯಾಗಿ ಇಲ್ಲಿಂದ ಮಾಡುವ ಕೆಲಸ ಮಧ್ಯದಲ್ಲಿ ಪೂರ್ಣಾಕ್ಷರಿ ಆಗಿದೆ
11. ನಡೆದಾಡುತ್ತಾ ಎಳೆದುಕೊಂಡು ಹೋಗುವ ಟ್ರಾಲಿ ಮಲೆಯಾಳಿಯ ಬಾಯಲ್ಲಿ ಹೀಗಾಗಿದೆ.
12. ಕತ್ತಲಿರದಿದ್ದರೆ ಈ ನೋವೇ ಕಡಿಮೆ ಆಗಿ ಉಲ್ಟಾಪಲ್ಟಾ ಆಗಿಬಿಡುವುದಂತೆ ವಿರಹಿಗಳಿಗೆ
15. ಅರಸನಿಗೆ ಸಂಬಂಧಿಸಿದ ಓರೆಯಾದ ರಸ
17. ಆನೆಯಲ್ಲ, ಅಂಧಕಾರದ ಬಣ್ಣ

*ಉತ್ತರಗಳು..29 ..ಪುಟದಲ್ಲಿ*

# ಕಾಲವಾದ ಕಾಲ!

● ಪಾಲಹಳ್ಳಿ ವಿಶ್ವನಾಥ್

**ಮೊಮ್ಮಗ :** ಅಜ್ಜ ಹಿಂದೆ ಯಾವಾಗಲೋ ಬೆಳಕೂ ಪೂರ್ತಿ ಇರತಾ ಇರಲಿಲ್ಲ ಎಂದು ಕೇಳಿದ್ದೀನಿ. ಅದು ನಿಜವಾ?

**ಅಜ್ಜ :** ಹೌದು ಕಣೋ! ಬೆಳಕು ಇರದೆ ಇದ್ದರೆ ಅದಕ್ಕೆ ಕತ್ತಲೆ ಎಂದು ಕರೆಯುತ್ತಿದ್ದರು.

ಮೊ : ಏನು ಆಯಿತು ಆಗ?

**ಅ :** ಒಟ್ಟಿಗೆ ಐದು ಸೂರ್ಯರು ಎಲ್ಲಿಂದಲೋ ಬಂದು ವಕ್ಕರಿಸಿಕೊಂಡರು. ನಮ್ಮ ಭೂಮಿಗೆ ಈಗ 6 ಸೂರ್ಯರು. ಆದ್ದರಿಂದ ಸದಾ ಬೆಳಕು.

**ಮೊ :** ಯಾವಾಗ ಆಯಿತು ಅದು?

**ಅ :** ಯಾವಾಗ ಅಂದರೆ ಏನೋ ಅರ್ಥ? ಅಲ್ಲ ಕಣೋ! ಆ ಸಮಯದಲ್ಲೇ ಕಾಲ ನಿಂತೋಯ್ತಲ್ಲೋ!

**ಮೊ :** ಅಂದರೆ?

**ಅ :** ನಿನಗೆ ಆಗ 10 ವರ್ಷ, ನನಗೆ 60 ವರ್ಷ. ಈಗಲೂ ನನಗೆ 60 ವರ್ಷ, ನಿನಗೆ 10 ವರ್ಷ!

**ಮೊ :** ವರ್ಷ ಅಂದರೆ?

**ಅ :** ನಿಜವಾದ ಅರ್ಥ ಮಳೆ. ಬಹಳ ಹಿಂದೆ ನಮ್ಮ ಪೂರ್ವೀಕರು ಕಾಲವನ್ನು ಅಳೆಯಲು ಋತುಗಳನ್ನು ಬಳಸಿಕೊಳ್ಳುತ್ತಿದ್ದರು. ಆಗ ಹವಾಮಾನ ಬದಲಾಗುತ್ತಿತ್ತು. ಬೇಸಿಗೆ, ಮಳೆ, ಚಳಿಗಾಲ ಎಂದೆಲ್ಲ ಹೇಳುತ್ತಿದ್ದೆವು. ಈಗ ಅವೆಲ್ಲಾ ಇಲ್ಲವಲ್ಲ.

**ಮೊ :** ಮಳೆ ಇದೆಯಲ್ಲ ಅಜ್ಜ!

**ಅ :** ಹೌದಪ್ಪ! ಆದರೆ ಆಗ ಮಳೆ ನಿಯತಕಾಲಿಕವಾಗಿ ಬರುತ್ತಾ ಇತ್ತು.

**ಮೊ :** ನಿಯತಕಾಲಿಕ ಅಂದರೆ.

**ಅ :** ಅಂದರೆ ಎರಡು ಘಟನೆಗಳ ಮಧ್ಯೆ ನಿಖರ ಸಮಯದ ಅಂತರ! ಮಳೆ ಈಗಲೂ ಬರುತ್ತೆ. ಆದರೆ ಅದು ಯಾವಾಗ ಬರುತ್ತೆ ಅಂತ ಗೊತ್ತಾಗ್ತಾ ಇಲ್ಲವಲ್ಲ. ಕಾಲಾನ ಹೇಗೆ ಅಳೆಯೋದು ಹೇಳು?

**ಮೊ :** ಈ ಕಾಲಾನ ಹೇಗೆ ಅಳೆಯುತ್ತಿದ್ದರು ಅಂತ ನೀನು ಹೇಳು.

**ಅ :** ಈಗ ನಮ್ಮ ಸೂರ್ಯ ಇದಾನಲ್ಲ, ಅದೇ ಹಳೆಯ ಸೂರ್ಯ, ಈ ಸೂರ್ಯ ಹುಟ್ಟೋನು, ಆ ಸಮಯವನ್ನು ನಾವು ಬೆಳಿಗ್ಗೆ ಅಂತಾ ಇದ್ವಿ, ಆಗ ತಂಪು ಬೆಳಕು ಇರೋದು! ಆಮೇಲೆ ಆಕಾಶದಲ್ಲಿ ಸೂರ್ಯ ಮೇಲೆ ಹೋಗೋನು, ಅದಕ್ಕೆ ನಾವು ಮಧ್ಯಾಹ್ನ ಅಂತ ಹೇಳ್ತಾ ಇದ್ದೆವು. ವಿಪರೀತ ಬಿಸಿಲು, ಆಮೇಲೆ ಸೂರ್ಯ ಮುಳುಗೋನು ಅದಕ್ಕೆ ಸಂಜೆ ಅಂತ ಹೇಳ್ತಾ ಇದ್ದೆವು. ಅಯಿತು ಆಮೇಲೆ ಬೆಳಕು ಕಡಿಮೆ ಆಗೋದು. ಆಗ ಕತ್ತಲೆ ಕವಿಯೋದು!

**ಮೊ :** ಅಂದರೆ ಅಜ್ಜ, ಬೆಳಕು ಇಲ್ಲವಾದಾಗ ಕತ್ತಲೆ.. ಹೆದರಿಕೆ ಆಗ್ತಾ ಇರಲಿಲ್ವಾ?

**ಅ :** ಒಂದೊಂದು ಸಲಿ! ಆಗ ಮತ್ತೊಂದು ಬೆಳಕು ಹುಟ್ಟುತ್ತಿತ್ತು. ಅದೂ ಗುಂಡಗೆ ಕಾಣ್ತಾ ಇತ್ತು, ತಂಪಾದ ಬೆಳಕು.

**ಮೊ :** ಸೂರ್ಯನಷ್ಟಾ?

**ಅ :** ಇಲ್ಲ, ಮಗು! ಬಹಳ ಕಡಿಮೆ. ಆದರೆ ಸಾಕಾಗ್ತಿತ್ತು. ಬಹಳ ಸುಂದರ ಅದರ ಹೆಸರೇ ಚಂದ್ರ! ಅದ್ರ ಬೆಳಕೂ ಹೆಚ್ಚುಕಡಿಮೆ ಆಗೋದು. ಅದರೆ ನಕ್ಷತ್ರಗಳು ಯಾವಾಗಲೂ ಇರ್ತಾ ಇದ್ದವು.

**ಮ :** ನಕ್ಷತ್ರ ಅಂದರೆ ಏನು?

**ಅ :** ಬಹಳ ದೂರದ ಬೆಳಕುಗಳು, ಬಹಳ ಬಹಳ ದೂರ. ಆ ಕತ್ತಲೆಯ ಸೊಬಗನ್ನು ನಿನಗೆ ಹೇಗೆ ಬಣ್ಣಿಸಲಿ? ಆಮೇಲೆ ಹಾಗೆ ಸ್ವಲ್ಪ ಸಮಯ ಕಳೆದ ನಂತರ ಸೂರ್ಯ ಮತ್ತೆ ಹುಟ್ಟುಬರುತ್ತಿದ್ದ. ಆಗ ನಾವು ಒಂದು ದಿನ ಕಳೆಯಿತು ಅಂತಾ ಇದ್ದೆವು.

**ಮೊ :** ಈಗ ದಿನ ಇಲ್ಲ!

**ಅ :** ಹೌದು! ಆದ್ದರಿಂದ ವಾರ, ಅಂದರೆ 7 ದಿನಗಳ ಅಳತೆ ಹೋಯಿತು! ತಿಂಗಳು ಅಂದರೆ 30 ದಿನಗಳ ಅಳತೆ ಹೋಯಿತು. 365 ದಿನಗಳ ಅಳತೆ ವರ್ಷ ಹೋಯಿತು!

**ಮೊ :** ಸ್ವಲ್ಪ ಅರ್ಥ ಆಗ್ತಾ ಇದೆ.

**ಅ :** ಹಾಗೇ ಕಾಲವೇ ನಿಂತು ಹೋಯಿತು ಕಣೊ! ಹಿಂದೆ ಕಾಲ ನಡಿತಾ ಇದ್ದಿದ್ದರಿಂದ ವಯಸ್ಸಾಗೋದು. ಚಿಕ್ಕವರು ದೊಡ್ಡವ್ರಾಗೋರು, ಬಹಳ ದೊಡ್ಡವರು ಸಾಯುವರು.

**ಮೊ :** ಸಾವು ಅಂದರೆ?

**ಅ :** ಇದ್ದವರು ಇಲ್ಲವಾಗುವುದು! ಸತ್ತವರನ್ನು ಕಾಲವಾದರು ಅನ್ನುತ್ತಿದ್ದೆವು. ಈಗ ಕಾಲವೇ ಕಾಲವಾಗಿಬಿಟ್ಟಿದೆ. ಹಾಗೆ ಕತ್ತಲೆಯ ಜೊತೆ ಸಾವೂ ಹೊರಟುಹೋಯಿತು. ಆ ದಿನ, ಆ ಕತ್ತಲೇ ಆಗದ ದಿನ, ಶುರುವಾದಾಗ ನಾವು ಹೇಗಿದ್ದೆವೋ ಹಾಗೆಯೇ ಇದ್ದೇವೆ.. ಮುದುಕರು ಮುದುಕರಾಗಿ ಉಳಿದುಕೊಂಡೆವು. ಪುಟ್ಟವರು ಪುಟ್ಟವರಾಗಿಯೇ ಉಳಿದುಕೊಂಡರು.

**ಮೊ :** ಹಾಗಾದರೆ ನಾನು ಹೀಗೆಯೇ ಇರಬೇಕೇ? ಅಪ್ಪನ ತರಹ, ನಿನ್ನ ತರಹ ಆಗೋಕೆ ಆಗೋದಿಲ್ಲವೇ?

**ಅ :** ಇಲ್ಲ, ಮಗು! ನೀನೂ ಹೀಗೇ ಇರ್ತೀಯಾ! ನಾನೂ ಹೀಗೇ ಇರ್ತೀನಿ. ನಿನ್ನ ಅಪ್ಪ, ಅಮ್ಮ ಎಲ್ಲಾ ಹಾಗೆ ಇರ್ತಾರೆ.

**ಮೊ :** ನಾನು ಚಂದ್ರನ್ನ ನೋಡಬೇಕಲ್ಲಾ ಅಜ್ಜ! ನಾನು ನಕ್ಷತ್ರಗಳನ್ನು ನೋಡಬೇಕು! ಕತ್ತಲನ್ನ ಅನುಭವಿಸಬೇಕು. ಯಾವಾಗ ಆಗುತ್ತೆ ಅಜ್ಜ ಇದೆಲ್ಲ!

**ಅ :** ಈ ಸಂಪಾದಕ್ರಿಗೆ ಹೇಳಪ್ಪ! ನನಗೂ ಈ ಜೀವನ ಸಾಕಾಯಿತು. ''ಈ ಹುಚ್ಚು ಸಾಕು! ಆ ಉಳಿದ ಐದು ಸೂರ್ಯರನ್ನು ವಾಪಸ್ಸು ಬಾಹ್ಯಾಕಾಶಕ್ಕೆ ಕಳಿಸಿ ಬಿಡಿ! ನಮಗೆ ಕತ್ತಲೆ ಬೇಕು.'' ಅಂತ ಬರಿ ಅವರಿಗೆ. ನೋಡು ಇದೆ ವಿಳಾಸ.. ಅಥವಾ ಫೋನ್ ನಂಬರ್ ಕೊಡಲೆ?

(ಖ್ಯಾತ ವೈಜ್ಞಾನಿಕ ಕಲ್ಪನಾ ಸಾಹಿತಿ ಐಸಾಕ್ ಅಸಿಮೋವ್‌ರ 'ನೈಟ್ ಫಾಲ್' ಎಂಬ ಕಥೆಯಲ್ಲಿ ಒಂದು ಭೂಮಿ 6 ಸೂರ್ಯರನ್ನು ಪರಿಭ್ರಮಿಸುತ್ತಿದ್ದು - 3000 ವರ್ಷಗಳಿಗೊಮ್ಮೆ ಸ್ವಲ್ಪವೇ ಸಮಯ ಕತ್ತಲೆಯನ್ನು ಅನುಭವಿಸುತ್ತದೆ.)

ಹಗಲೇ ಎಲ್ಲ, ರಾತ್ರಿ ಇಲ್ಲ

# ಇರುತ್ತಿರಲಿಲ್ಲ ಸಂಡೆ, ಮಂಡೆ

● ತುರುವೇಕೆರೆ ಪ್ರಸಾದ್


24x7 ಆದರೆ ಡೇ
ಇರುತ್ತಿರಲಿಲ್ಲ ಸಂಡೆ, ಮಂಡೆ
ಕಾಯುತ್ತಿರುವ ಮಡದಿಗೆ ಗಂಡ
ತರಲಾಗುತ್ತಿರಲಿಲ್ಲ ಸಂಜೆ ಮಲ್ಲಿಗೆ ದಂಡೆ!

ಜಗತ್ತಿನೆಲ್ಲೆಡೆ ಭಯಂಕರ ಧಗೆ
ಎಲ್ಲೆಲ್ಲೂ ವಿಪರೀತ ಹೊಗೆ
24*7 ಹೆಂಡತಿಯ ಮೇಕಪ್‌ಗೆ
ಗಂಡನಿಗೆ ಬೀಳುತ್ತಿತ್ತು ಎಕ್ಸ್‌ಟ್ರಾ ತೆರಿಗೆ!

ಪ್ರಪಂಚವಾಗುತ್ತಿತ್ತು ಸ್ಟಾಪಿಲ್ಲದ ಫ್ಯಾಕ್ಟರಿ
ಬದುಕಾಗುತ್ತಿತ್ತು ಡೇ, ನೈಟ್ ಶಿಫ್ಟಿಲ್ಲದ ಬುಗುರಿ
ನಿದ್ರೆಗೂ ಬೇಕಾಗುತ್ತಿತ್ತು ಮಾತ್ರೆ, ಪಿಚಕಾರಿ
ಮಧುಚಂದ್ರಕ್ಕೂ ಬೀಳುತ್ತಿತ್ತು ಕತ್ತರಿ!

ಇರುತ್ತಿರಲಿಲ್ಲ ಕತ್ತಲ ಲೋಕದ ಮಾಟ, ಮೈ ಮಾಟ
ಬ್ರಹ್ಮಾಂಡ ಗುರೂಜಿಗಳ ಶನಿಕಾಟ
ಚಂದಮಾಮನ ತೋರಿಸಲಾಗದೆ ಅಮ್ಮನಿಗೆ ಪೀಕಲಾಟ
ಆಡಬೇಕಿತ್ತು ಮಗು ಅಪ್ಪನ ಬೋಳುತಲೆಯಲ್ಲೇ ಗುಮ್ಮನಾಟ!

ಮೇರೆ ಮೀರುತ್ತಿತ್ತು ಮಾನವನ ಕ್ರೌರ್ಯ
ಸೂರೆಯಾಗುತ್ತಿತ್ತು ಪೂರಾ ನಿಸರ್ಗದ ಆಂತರ್ಯ!
ಕನಸಿಲ್ಲದ ಕಣ್ಣಲ್ಲಿ ಗಂಡನ ಕಾಯಬೇಕಿರಲಿಲ್ಲ ಭಾರ್ಯೆ
ಬದುಕಲ್ಲಿ ಎಂದೂ ಹುಟ್ಟುತ್ತಿರಲಿಲ್ಲ ಹೊಸ ಸೂರ್ಯ!




# ರಾತ್ರಿಗಳಿಲ್ಲದ ದಿನಗಳೆ?

**● ಸಿ.ಆರ್. ಸತ್ಯ**

ಇತ್ತೀಚೆಗೆ ಸರಕಾರದ ಮಂತ್ರಿ ಒಬ್ಬರು (ಯಾವ ಸರಕಾರ, ಯಾವ ಮಂತ್ರಿ ಅನ್ನೋದು ಮರೆತುಹೋಗಿದೆ) ಬರುವ ಯುಗಾದಿ ದಿನದಿಂದ ದಿನವೂ 24 ಗಂಟೆಗಳ ಕಾಲ ನಮ್ಮ ದೇಶದಲ್ಲಿ ಬೆಳಕೇ ಇರುವ ಹಾಗೆ ತಾಂತ್ರಿಕ ವ್ಯವಸ್ಥೆ ಮಾಡಿ, ರಾತ್ರಿಗಳನ್ನು ನಿಷೇಧಿಸುತ್ತಾರೆ ಎಂಬ ಸುದ್ದಿ ಸುನಾಮಿಯಂತೆ ಎಲ್ಲಾ ಕಡೆಯೂ ಹರಡುತ್ತಿದೆ. ಇದಕ್ಕೆ ಕಾರಣ : ಮಂತ್ರಿಗಳ ಪ್ರಕಾರ, ನಮ್ಮ ಜನತೆ ವಿಪರೀತ ಸೋಮಾರಿಗಳಾಗಿದ್ದು ಕೆಲಸ ಕಮ್ಮಿ ಮಾಡುತ್ತಿದ್ದಾರೆ. - ಹಾಗಾಗಿ, ದಿನವನ್ನು ವಿಸ್ತರಿಸಿದರೆ ಆಫೀಸ್‌ನಲ್ಲಿ ಅವರಿಂದ ಇನ್ನಷ್ಟು ಕೆಲಸ ತೆಗೆಯಬಹುದು ಅಂತ. ಹಾಗಾದರೆ ಜನರು ಯಾವಾಗ ನಿದ್ದೆ ಮಾಡಬೇಕು ಅನ್ನುವ ಪ್ರಶ್ನೆಗೆ ಅವರು, ಹೇಗಿದ್ದರೂ ಅವರೆಲ್ಲಾ ಆಫೀಸ್‌ನಲ್ಲಿ ಈಗಲೂ ಅರ್ಧ ದಿವಸ ನಿದ್ದೆ ತಾನೇ ಮಾಡೋದು. ಆದ್ದರಿಂದ ಇನ್ನೊಂದು ಶಿಫ್ಟ್‌ನಲ್ಲಿ ಅವರು ನಿದ್ದೆ ಮುಂದುವರೆಸಲಿ– ಹಾಗೇ ಸ್ವಲ್ಪ ಕೆಲಸಾನೂ ಮಾಡಲಿ– ಅಂತ ಹೇಳಿದ್ದಾರೆ. ಮಂತ್ರಿಗಳ ಆದೇಶಕ್ಕೆ ಜನರು ಮಾತ್ರವಲ್ಲ, ಎಲ್ಲಾ ಜೀವಿಗಳೂ ತಮ್ಮ ವಿರೋಧವನ್ನು ವ್ಯಕ್ತಪಡಿಸ್ತಿವೆ. ಕೆಲವು ಸ್ಯಾಂಪಲ್‌ಗಳು ಹೀಗಿವೆ:

**ಕೋಳಿಯಮ್ಮಾಳ್, ಅಖಿಲ ಭಾರತ ಮೊಟ್ಟೆ ಕೋಳಿ ಸಮುದಾಯದ ಅಧ್ಯಕ್ಷೆ:** ಇದು ಬಹಳ ಅನ್ಯಾಯದ ಆದೇಶ. ನಾವುಗಳು, ಅಂದರೆ, ಹೆಣ್ಣು ಕೋಳಿಗಳು, ಮೊಟ್ಟೆ ಗಿಟ್ಟೆ ಹಾಕಿ, ಮಕ್ಕಳನ್ನು ಸಾಕುವ ಕೆಲಸದಲ್ಲೇ ಇರುವಾಗ, ನಮ್ಮ ಹುಂಜಗಳಿಗೆ ಇದ್ದಿದ್ದ ಕೆಲಸವೆಂದರೆ ಬೆಳಗಾಗುತ್ತಲೇ ಕೋಕ್ಕ್, ಕೊಕ್ಕ್ ಕೋ! ಅಂತ ಕಿರುಚಿಕೊಂಡು ಸೋಮಾರಿಗಳನ್ನ ಎಬ್ಬಿಸೋದಾಗಿತ್ತು. ಈಗ ಅವರುಗಳು ಎಷ್ಟು ಹೊತ್ತಿಗೆ ಕೂಗಬೇಕು? ಯಾರನ್ನು ಯಾವಾಗ ಎಬ್ಬಿಸಬೇಕು? ಸಧ್ಯ, ಮಲಗಿರೋವಾಗ ನಮ್ಮನ್ನು ಎಬ್ಬಿಸದಿದ್ದರೆ ಸರಿ. ಈ ಆದೇಶವನ್ನು ಖಂಡಿಸಿ, ನಮ್ಮ ಗಂಡಂದಿರೆಲ್ಲರೂ ಆ ಮಂತ್ರಿಗಳ ಮನೆಗೆ ಹೋಗಿ 24 ಗಂಟೆಗಳ ಕಾಲ ಅರಚಿಕೊಂಡು ಅವರ ನಿದ್ದೆ ಕೆಡಿಸಲಿ ಅಂತ ನಾವು ನಿರ್ಧರಿಸಿದ್ದೇವೆ. ನಾವು ಕೊಕ್ಕೊಕ್ ಕೋ ಅಂತ ಕೂಗೋದು ನಿಲ್ಲಿಸಿದರೆ, ನಮ್ಮ ಜೀವನವೆಲ್ಲಾ ಬರೇ ಚಿಕನ್ ಬಿರಿಯಾನಿಗೆ ಮೀಸಲಾಗುತ್ತೆ. ಇದು ಯಾವ ನ್ಯಾಯ?

**ಟೆರಿಯರ್ ಟೈಗರ್, ಅಧ್ಯಕ್ಷರು, ಕಚ್ಚೋ ನಾಯಿಗಳ ಸೌಹಾರ್ದ ಸಂಘ :** ಯಾರು ರೀ ಈ ಮಂತ್ರಿ? ಅವರಿಗೇನು ಬುದ್ಧಿ ಬೇಡವಾ? ತಲೆಮಾರುಗಳಿಂದ ಬೆಳಿಗ್ಗೆ ಆಗುವುದಕ್ಕೆ ಮುಂಚೆ, ಬೆಳಗಿನ ಜಾವ, ನಮ್ಮಗಳ ರಸ್ತೆಯಲ್ಲಿ ಗೊರಕೆಯಲ್ಲಿ ಇರೋ ಜನರನ್ನ ಎಬ್ಬಿಸೋಕ್ಕೆ ನಾವುಗಳು ಬೊಗಳ್ತಾ ಇದ್ವಿ. ಅವರುಗಳು ಹೊರಗೆ ಬಂದರೆ ಕಚ್ಚುತ್ತಾನೂ ಇದ್ವಿ. ಪೇಪರ್ ಹಾಕೋ ಹುಡುಗರನ್ನ, ಚಿಂದಿ ಆಯೋ ಹೆಂಗಸರನ್ನ, ಜಾಗಿಂಗ್ ಮಾಡೋ ಹೈದರನ್ನ ಅಟ್ಟಿಸ್ಕೊಂಡು ಹೋಗಿ ಅವರಿಗೆ ಏನು ಶಿಕ್ಷೆ ಕೊಡಬೇಕೋ ಕೊಡ್ತಿದ್ವಿ. ಇದೆಲ್ಲಾ ನಮ್ಮ ಡ್ಯೂಟಿ ಅಂತ ಪರಿಪಾಲಿಸ್ತಿದ್ವಿ. ಅದೂ ಅಲ್ಲದೆ ಬೆಳಗಿನ ಜಾವ ಟ್ರಾಫಿಕ್ ಇಲ್ಲದೆ ಇರೋದರಿಂದ, ರಸ್ತೆ ಎಲ್ಲಾ ನಮ್ಮದೇ ಆಗಿರುತ್ತೆ. ಈಗ ನಾವು ಎಷ್ಟು ಹೊತ್ತಿಗೆ ಬೊಗಳ ಬೇಕು? ಯಾವಾಗ ಜಾಗಿಂಗ್ ನವರನ್ನ ಕಚ್ಚಬೇಕು? ಮಧ್ಯಾಹ್ನ ಯಾವಾಗ ಆಗುತ್ತೆ? ನಾವು ನಿದ್ದೆ ಮಾಡೋದು ಯಾವಾಗ? ನಮ್ಮ ಬೆಡ್‌ರೂಮ್‌ನಲ್ಲಿ –ಅಂದರೆ ರೋಡ್

ಮಧ್ಯದ ಜಾಗ- ಯಾವಾಗ ಟ್ರಾಫಿಕ್ ಇರುತ್ತೆ, ಇರಲ್ಲ? ಮಂತ್ರಿಗಳು ಇವಕ್ಕೆಲ್ಲಾ ಈಗಲೇ ಸ್ಪಷ್ಟವಾದ ಉತ್ತರ ಕೊಡಲೇಬೇಕು, ಇಲ್ಲದಿದ್ದರೆ, ಅವರು ವಾಕಿಂಗ್ ಹೋಗೋವಾಗ....

**ಸೆಕ್ಷನ್ ಆಫೀಸರ್, ರೆವಿನ್ಯೂ ಇಲಾಖೆ :** ಈಗ ಬಹಳ ಕಷ್ಟಪಟ್ಟು ಹೇಗೋ ಆಫೀಸ್‌ಗೆ ಬಂದು, ಒಂದೋ ಎರಡೋ ಫೈಲ್‌ಗಳನ್ನ ಪಕ್ಕಕ್ಕೆ ತಳ್ಳಿ, ನಮ್ಮ ಸುಸ್ತನ್ನ ನಿವಾರಿಸ್ಕೊಳ್ಳೋಕ್ಕೆ ನಮ್ಮ ಕೋಟ್‌ಗಳನ್ನ ಕುರ್ಚಿಯ ಮೇಲೆ ಇಟ್ಟು, ಕ್ಯಾಂಟೀನ್‌ಗೆ ಹೋಗಿ, ಆಗಾಗ ಒನ್ ಬೈಟೂ ಕಾಫಿ ಕುಡೀತಾ, ಸಧ್ಯ ಸಂಜೆ ಐದು ಗಂಟೆ ಆದ್ರೆ ಸಾಕಪ್ಪಾ ಅಂತ ಕಾದು ಮನೆಗೆ ಹೋಗ್ತಾ ಇದ್ವಿ. ಮಧ್ಯಾಹ್ನ ಮನೆಯಿಂದ ಕಳಿಸ್ತಿದ್ದ ಟಿಫಿನ್ ಕ್ಯಾರಿಯರ್‌ನಿಂದ ಊಟ ಮಾಡ್ತಿದ್ವಿ. ಈಗ ನಮ್ಮ ಜೀವನ ವಿಧಿಗಳು ಉಲ್ಟಾಪಲ್ಟಾ ಆಗೋದಂತೂ ಗ್ಯಾರಂಟಿ. ಯಾವಾಗ ಆಫೀಸ್‌ಗೆ ಬರೋದು? ಯಾವಾಗ ಮನೆಗೆ ಹೋಗೋದು? ಎಷ್ಟು ಸಲ ಅಂತ ಬೈಟೂ ಕಾಫಿ ಕುಡಿಯೋದು? ನಮ್ಮ ಹೆಂಡತೀರನ್ನ ಎರಡು ಬಾರಿ ಟಿಫಿನ್ ಕ್ಯಾರಿಯರ್ ಕೊಡಿ ಅಂದರೆ ನಮ್ಮನ್ನ ಮನೆಯಿಂದ ಹೊರಗೆ ಹಾಕ್ತಾರೆ. 24 ಗಂಟೆಗಳಲ್ಲಿ ನಾವು ಎಷ್ಟು ಸಲ ಕ್ಯಾಂಟೀನ್‌ಗೆ ಹೋಗೋದಕ್ಕೆ ಆಗುತ್ತೆ? ಅದಕ್ಕೆ ಎಕ್ಸ್ಟ್ರಾ ದುಡ್ಡು ಬೇಡವೇ? ಮಂತ್ರಿಯವರು ಇದನ್ನ ಸ್ಯಾಂಕ್ಷನ್ ಮಾಡ್ತಾರೇನೂ...? ಅದೂ ಅಲ್ಲದೆ ಈಗ ನಾವು ನಮ್ಮ ಕೋರ್ಟ್‌ನ ಕುರ್ಚಿ ಮೇಲೆ ಹಾಕಿ ಕ್ಯಾಂಟಿನ್‌ಗೆ ಹೋಗೋದು ನಾವು ಆಫೀಸ್‌ಗೆ ಬಂದಿದ್ದೀವಿ ಅಂತ ಸಾಬೀತು ಮಾಡೋಕ್ಕೆ. ದಿನಕ್ಕೆ 15-16 ಗಂಟೆಗಳ ಕಾಲ ಕೋಟು ಕುರ್ಚಿ ಮೇಲೇ ಇದ್ದರೆ ಕುರ್ಚಿ ಪೈಂಟು ಕೋಟ್‌ಗೆ ಹತ್ತಲ್ವೆ?

**ಜಾನ್ ಜೇಕಬ್, ಸೆಕ್ರೆಟರಿ, ಐ.ಟಿ.ಬಿ.ಟಿ ಬೀರ್ ಕ್ಲಬ್ :** ನಮ್ಮ ದೇಶದಲ್ಲಿ ಕಷ್ಟಪಟ್ಟು ದುಡಿಯೋರು ನಾವೊಬ್ಬರೇ! ಅದಕ್ಕೇ ನಮಗೆ ಜಾಸ್ತಿ ಸಂಬಳ ಕೊಟ್ಟು ಕತ್ತಲೆ ಆದ ಮೇಲೆ ಎಲ್ಲರೂ ಬೀರ್ ಕುಡಿದು, ರಿಲಾಕ್ಸ್ ಮಾಡಿಕೊಂಡು ಮನೆಗೆ ಹೋಗಿ ಅಂತ ಆಫೀಸ್ ಆರ್ಡರ್‌ನೇ ಕೊಟ್ಟಿದ್ದಾರೆ. ಈಗ ಈ ಮಂತ್ರಿ ಪುಣ್ಯಾತ್ಮರಿಂದಾಗಿ, ನಮಗೆ ಯಾವಾಗ ಕತ್ತಲೆ ಆಗುತ್ತೆ? ನಮಗೆ ಯಾವಾಗ ಬೀರ್ ಟೈಮ್ ಬರುತ್ತೆ? ಬೀರ್ ಕುಡಿದು ಬ್ರಿಗೇಡ್ ರೋಡ್‌ನಿಂದ ಮನೆ ಕಡೆ ಹೋಗಬೇಕೋ ಅಥವಾ ಎಲೆಕ್ಟ್ರಾನಿಕ್ಸ್ ಸಿಟಿ ಕಡೆ ಹೋಗಬೇಕೋ? ಕುಡಿದು ಡ್ರೈವ್ ಮಾಡಿದ್ರೆ ಈಗ ಪೋಲಿಸ್‌ನವರು ಹೊಸಾ ರೂಲ್ಸ್ ಪ್ರಕಾರ ನಮ್ಮನ್ನ ಜೈಲ್‌ಗೇ ಹಾಕ್ತಾರೆ? ನಮ್ಮ ವೀಕೆಂಡ್ ಪಾರ್ಟಿಗಳ ಗತಿ ಏನು? ಈಗೆಲ್ಲಾ ಪಾರ್ಟಿಗಳನ್ನ ಶನಿವಾರ ಸಂಜೆ ಶುರು ಮಾಡಿ ಸೋಮವಾರ ಬೆಳಗಿನ ಜಾವಕ್ಕೆ ಮುಗಿಸಿ, ಬೆಳಕಾಗೋದಕ್ಕೆ ಮುಂಚೆ ಹೇಗೋ ಮನೆಗೆ ಸೇರಿಕೊಳ್ಳುತ್ತಿದ್ವಿ. ಈಗ ಸಂಜೆ, ರಾತ್ರಿ ಅನ್ನೋದೆ ಇಲ್ಲದ ಮೇಲೆ, ಯಾವಾಗ ಪಾರ್ಟಿ ಶುರುಮಾಡಬೇಕು, ಯಾವಾಗ ಮುಗಿಸಬೇಕು? ಯಾವುದೋ ಸಮಯದಲ್ಲಿ ನಾವುಗಳು ಪಬ್‌ಗಳಿಗೆ ಹೋಗೋದಕ್ಕೆ ಆಗುತ್ಯೆ? ಪಬ್ ಓನರ್‌ಗಳೂ ಮನೆಗೆ ಹೋಗಬೇಡವೆ? ಅವರಿಗೂ ಕುಡಿಯೋಕ್ಕೆ ಟೈಮ್ ಬೇಡವೆ? ಈ ಮಂತ್ರಿಯವರು ಪಾಪ, ಬೀರ್ ಭಕ್ತರಲ್ಲ ಅಂತ ಕಾಣುತ್ತೆ. ಒಟ್ಟಿನಲ್ಲಿ ನಮಗೆ ಕಷ್ಟ ಕಾಲ ಕಾದಿದೆ.

**ಶಾರ್ಪ್ ಬ್ಲೇಡ್ ಶಂಕರ್, ಪ್ರೆಸಿಡೆಂಟ್, ಸೌತ್ ಇಂಡಿಯಾ ಕಳ್ಳ-ಕಾಕರ ಯೂನಿಯನ್ :** ಇದೆಂತಹಾ ರೂಲ್ಸ್ ರೀ? ಇಲ್ಲಿ ತನಕ ರಾತ್ರಿ ಆದರೆ ನಾವು ಡ್ಯೂಟಿಲಿ ಇರ್ತಿದ್ವಿ, ಪೋಲಿಸಿನವರು ಡ್ಯೂಟಿ ಆಫ್‌ನಲ್ಲಿ ಇರೋರು. ಜೀವನ ಸುಗಮವಾಗಿತ್ತು.

ಈಗ ರಾತ್ರಿ ಅನ್ನೋದೇ ಇಲ್ಲದಿದ್ದರೆ, ನಮ್ಮ ಗತಿ ಏನು? ನಾವು ಯಾವಾಗ ಕೆಲಸ ಮಾಡಬೇಕು? ನಾವೇನು ಬದುಕಬಾರದೇನು? ನಾವೂನೂ ರೈತರ ತರಹ ಆತ್ಮಹತ್ಯೆ ಮಾಡಿಕೊಳ್ಳಬೇಕು ಅಷ್ಟೆ! ಬ್ಯಾಂಕ್‌ಗಳನ್ನೇ ಕದಿಯೋ ನಮಗೆ ಯಾರು ರೀ ಬ್ಯಾಂಕ್ ಲೋನ್ ಕೊಡ್ತಾರೆ? ಬೆಳಕು ಇರೋವಾಗ ನಾವು ಕೈನಲ್ಲಿ ಲಾಂಗು ಮಚ್ಚು ಹಿಡ್ಕೊಂಡು ರೋಡ್‌ನಲ್ಲಿ ಓಡಾಡ್ತಿದ್ದರೆ, ಜನ ಸುಮ್ಮನೆ ಇರುತ್ತಾರೆಯೇ? ನಮಗೆ ಕಣ್ಣು ಸರಿಯಾಗಿ ಕಾಣೋದೆಲ್ಲಾ ಕತ್ತಲೆ ಹೊತ್ತಿನಲ್ಲೇ. ಈಗ ಯಾವಾಗಲೂ ಬೆಳಕೇ ಇದ್ದರೆ ನಮ್ಮ ದೃಷ್ಟಿ ಗತಿ ಏನು? ಈಗ ನಾವು ಕೆಲಸ ಮಾಡೋ ಸಮಯದಲ್ಲಿ ಮನೆ ನಾಯಿಗಳೆಲ್ಲಾ ಮಲಗಿರುತ್ವೆ. ಈ ಮಂತ್ರಿಯಿಂದಾಗಿ ನಾವು ಹಾಡು ಹಗಲಲ್ಲೇ ಕೆಲಸಕ್ಕೆ ಇಳಿದರೆ, ಬರಿ ಬಾಯಿಗಳು ಮಾತ್ರ ಅಲ್ಲ, ಮನೆ ಮಾಲಿಕರೂ ಎದ್ದಿರುತ್ತಾರೆ. ಅವರು ನಮ್ಮನ್ನ ಸುಮ್ಮನೆ ಬಿಡ್ತಾರೆಯೇ? ಮಂತ್ರಿಗಳೂ ನಮ್ಮ ಯೂನಿಯನ್ ಮೆಂಬರ್ ಆಗಿರೋದರಿಂದ ಅವರಿಗೆ ನಾವು ಪಡೋ ಕಷ್ಟ ಅರ್ಥವಾಗಿ ಈ ಆದೇಶವನ್ನು ವಾಪಸ್ ತೊಗೋಬೇಕು ಅಂತ ಕೇಳ್ಕೊತಾ ಇದೀವಿ.

**ನೈಟ್ ಡ್ಯೂಟಿ ಸೂಪರ್‌ವೈಸರ್, ಎಲೆಕ್ಟ್ರಿಸಿಟಿ ಬೋರ್ಡ್ :** ಒಂದು ವಿಧದಲ್ಲಿ, ನಮಗೆ ಒಳ್ಳೆಯದಾಯಿತು ಬಿಡಿ. ಇನ್ನು ಮೇಲೆ ರಸ್ತೆ ದೀಪಗಳನ್ನು ಆನ್ ಮಾಡೋದು, ಆಫ್ ಮಾಡೋದು, ರಾತ್ರಿ ಕಂಪ್ಲೈಂಟ್ಸ್‌ಗೆ ಮಳೆ ಗಾಳೀಲಿ ಓಡಾಡೋದು – ಇದ್ಯಾವುದೂ ಇರಲ್ಲ. ಆದರೆ, ಇದರ ಬದಲು ನಮಗೆ ಡಬಲ್ ಡೇ ಡ್ಯೂಟೀ ಬಿದ್ದರೆ ಏನುಗತಿ? ಓವರ್ ಟೈಮ್ ಸಿಗುತ್ತೋ ಇಲ್ಲವೋ ಗೊತ್ತಿಲ್ಲ.

**ನಾಗಪ್ಪ ಶಾಸ್ತ್ರಿಗಳು, ಅರ್ಚಕರು :** ಇನ್ನು ಮೇಲೆ ವಿನಾಯಕ ಚತುರ್ಥಿ ದಿನ ಗಣಪತಿ ಪೂಜೆ ಮಾಡಿದವರು ಯಾವಾಗ ಬೇಕಾದರೂ ತಲೆ ಎತ್ತಿ ಆಕಾಶದ ಕಡೆ ನೋಡಬಹುದು. ರಾತ್ರೀನೇ ಇಲ್ಲದೆ, ಚಂದ್ರನೂ ಇಲ್ಲದಿದ್ದಾಗ, ಚಂದ್ರನನ್ನು ನೋಡೋ ಪ್ರಮೇಯವೇ ಇಲ್ಲ, ಚಂದ್ರನನ್ನು ನೋಡಿದರೆ ಶಾಪ ತಟ್ಟುವ ಸಂಭವವೇ ಇಲ್ಲ. ಗಣ್ಯಾತಿ ಗಣ್ಯ ಮಂತ್ರಿಗಳು ಇಂತಹ ನಿರ್ಧಾರ ತೆಗೆದುಕೊಂಡಿರುವುದು ಲೋಕ ಕಲ್ಯಾಣಕ್ಕೆ ಅಂತ ನನ್ನ ಅನಿಸಿಕೆ. ಶಾಪಗ್ರಸ್ತ ಜನರು ನಮ್ಮ ಸಮಾಜದಲ್ಲಿ ಇರಬಾರದು.

**ಸೆಕ್ರೆಟೆರಿ, ಅಖಿಲ ಕರ್ನಾಟಕ ಪ್ರೇಮಿಗಳ ಒಕ್ಕೂಟ :** ನಮಗೆ, ಅಂದರೆ ಪ್ರೇಮಿಗಳಿಗೆ, ಈ ಮಂತ್ರಿ ಮಾಡಿರೋ ಅನ್ಯಾಯವನ್ನು ಸಹಿಸಿಕೊಳ್ಳೋದು ಹ್ಯಾಗೆ ಅಂತ ನಮ್ಮೆಲ್ಲರ ಯೋಚನೆ ಆಗಿದೆ. ಚಾನ್ಸ್ ಸಿಕ್ಕಿದಾಗಲೆಲ್ಲಾ, ನಮ್ಮಂತಹ ಪ್ರೇಮಿಗಳು ಕೈ, ಕೈ ಮಿಲಾಯಿಸಿಕೊಂಡು, ಮೂನ್ ಲೈಟ್‌ನಲ್ಲಿ ಚಂದ್ರನನ್ನೇ ನೋಡ್ತಾ, ಸಂಗೀತ ಗೊತ್ತಿಲ್ಲದಿದ್ದರೂ ಸಿನಿಮಾ ಹಾಡು ಗೊಣಗುತ್ತಾ, ಅರ್ಥವಿಲ್ಲದ ಪ್ರೀತಿ ಮಾತುಗಳನ್ನು ಆಡಿಕೊಂಡು ಕಾಲ ಕಳೆಯುವ ಕಾಲ ಮುಗೀತು. ಈಗ ಸನ್ ಲೈಟ್‌ನಲ್ಲಿ ರೊಮಾನ್ಸ್ ಮಾಡೋದಕ್ಕೆ ಆಗುತ್ತೆ? ಸಿನಿಮಾದಲ್ಲೋ ನಾಟಕದಲ್ಲೋ ಧಗ ಧಗ ಉರೀತಿರೋ ಸೂರ್ಯನ ಮುಂದೆ, ಹೀರೋ ಹೀರೋಯಿನ್ (ಇನ್ನಷ್ಟು ಇಪ್ಪತ್ತು ಜನರ ಜೊತೆಗೆ) ಡ್ಯಾನ್ಸ್ ಮಾಡೋದು ಯಾವಾಗಲಾದರೂ ನೋಡಿದ್ದೀರಾ? ಅದೂ ಅಲ್ಲದೆ, ಬೆಳಕಿನಲ್ಲಿ ಒಬ್ಬರ ಮುಖ ಇನ್ನೊಬ್ಬರು ನೋಡಿದರೆ, ಮೂಗು ಕೆನ್ನೆ ಮೇಲೆ ಇರೋ ಬೊಕ್ಕೆಗಳೆಲ್ಲಾ ಎದ್ದು ಕಾಣಲ್ವೆ? ಇನ್ನು ಮೇಲಿಂದ ನಾವು ರೊಮಾನ್ಸ್ ಮಾಡೋಕ್ಕೆ ಯಾವುದಾದರು ಸಿನಿಮಾ ಥಿಯೇಟರ್ ಒಳಗೆ ಹೋಗಿ ಅಲ್ಲಿ ಕಾಣೋ 'ಎಕ್ಸಿಟ್' ಲೈಟ್‌ನೇ ಚಂದ್ರ ಅಂತ

ಊಹಿಸಿಕೊಂಡು ಕಾಲ ಕಳೀಬೇಕು. ಮಲ್ಟಿಪ್ಲೆಕ್ಸ್‌ಗಳಲ್ಲಿ ಈಗ ಟಿಕೆಟ್‌ಗಳೂ ದುಬಾರಿ. ನಮ್ಮಂತಹ ಜೋಡಿಗಳಿಗೆ ಈ ಮಂತ್ರಿ ರಿಯಾಯಿತಿ ಟಿಕೆಟ್‌ಗಳಿಗೆ ಅನುಕೂಲ ಮಾಡಿಕೊಟ್ಟರೆ ನಮ್ಮ ಜೀವನ ಸುಗಮವಾಗುತ್ತೆ.

ಇದೇ ರೀತಿ ನೂರಾರು ಜನರು ಮಂತ್ರಿಗಳ ಮೇಲೆ ತೋರಿದ ಕೋಪಕ್ಕಾಗಿ, ಮಂತ್ರಿಯವರು ಹೀಗೆ ಪ್ರತಿಕ್ರಿಯಿಸಿದ್ದಾರೆ. ''ಇದು ನಾವು ಹಿಂದಕ್ಕೆ ತೆಗೆದುಕೊಳ್ಳುವ ನಿರ್ಧಾರವಲ್ಲ. ಜನರು ಡಬಲ್ ಕೆಲಸ ಮಾಡಿ ದೇಶವನ್ನು ಉದ್ಧಾರ ಮಾಡುವುದು ನಮ್ಮ ಧ್ಯೇಯ. ಇದುವರೆಗೂ ನಮ್ಮ ಹಿರಿಯ ಪೀಳಿಗೆಯವರು ಚೆನ್ನಾಗಿಯೇ ನಿದ್ರೆ ಮಾಡಿದ್ದಾರೆ. ಹಗಲು ಹೊತ್ತೂ ಸೇರಿ. ಹಾಗಾಗಿ ಈಗಿನ ಜನ ನಿದ್ರೆ ಮಾಡುವ ಅವಶ್ಯಕತೇನೆ ಇಲ್ಲ. ಅದೂ ಅಲ್ಲದೆ ಈಗಾಗಲೇ ಈ ಯೋಜನೆಗೆ 10,000 ಕೋಟಿ ರೂಪಾಯಿಗಳ ಟೆಂಡರ್ ಕರೆದು ವರ್ಕ್ ಆರ್ಡರ್ ಅನ್ನು ನಾವು ಇಷ್ಯೂ ಮಾಡಿ ಆಗಿದೆ. ಅದನ್ನ ಕ್ಯಾನ್ಸಲ್ ಮಾಡೊಹಾಗಿಲ್ಲ. ಆಗಲೇ ಕಂಟ್ರಾಕ್ಟರ್ ಸೂರ್ಯನನ್ನು ಒಂದೇ ಕಡೆ ಹಿಡಿದು ನಿಲ್ಲಿಸೋಕ್ಕೆ, ಚಂದ್ರನು ಹುಟ್ಟಿ ಬರದ ಹಾಗೆ ಸಾವಿರ ಟನ್‌ಗಳ ಕ್ರೇನ್‌ಗಳನ್ನು ಸಿದ್ದ ಮಾಡಿ ಪೂರ್ವ ಪಶ್ಚಿಮದಲ್ಲಿ ಇದುವರೆವಿಗೂ ಕಂಡರಿಯದ ಎತ್ತರದಲ್ಲಿ ಗೋಡೆಗಳನ್ನು (ಗ್ರೇಟ್‌ವಾಲ್ ಆಫ್ ಚೈನಾ ಮಾದರಿ) ಕಟ್ಟಲು ಕಲ್ಲು ಸಿಮೆಂಟ್ ರೆಡಿ ಮಾಡಿದ್ದಾರೆ. ಅಷ್ಟೇ ಅಲ್ಲ ಇದಕ್ಕೆ ಪೂರ್ವ ಸಿದ್ದತೆಗಾಗಿ, ನಾವು 'ಇಸ್ರೋ' ಸಂಸ್ಥೆಗೆ ಕಾಗದ ಬರೆದು, ಹೇಗಿದ್ದರೂ ಚಂದ್ರನ ಬಳಿ ಹೋಗಿದ್ದೀರಿ, ಅದರ ಮೇಲೆ ಒಂದು ಕಪ್ಪು ಬಣ್ಣದ ಪರದೆ ಹರಡಿ, ಚಂದ್ರನ ಬೆಳಕು ಭೂಮಿಗೆ ಬರದ ಹಾಗೆ ತಡೆಯೋಕ್ಕೆ ಆಗುತ್ತೆ? ಅಂತ ಕೇಳಿದ್ದೀವಿ. ಜೈ ಹಿಂದ್!'' ■

**ಪದಬಂಧ - ಉತ್ತರ**

| | | | | | | | |
|---|---|---|---|---|---|---|---|
| 1 ಪ | 2 ಣ | ■ | 3 ಸ | ಪ್ಲೈ | ■ | ■ | 4 ಚೋ |
| 5 ಹ | ನಿ | ಮೂ | ನ್ | ■ | 6 ಗ | 7 ಸಾ | ರ |
| 8 ರೇ | ಪು | ■ | ಸ | ■ | 9 ರಾ | ಫ್ಟ್ | ■ |
| ದಾ | ■ | 10 ಸ | ನ್ | 11 ಸ್ಟ್ರೋ | ಕ್ | ವೇ | 12 ನೆ |
| 13 ರ | ಮ್ | ■ | 14 ಇ | ಳಿ | ಪ | ರ | ದ |
| ■ | ■ | 15 ಓ | ನ್ | ■ | 16 ದೀ | ಕೆ | ವೇ |
| 17 ಕ | ಳ್ಳ | ರ | ಸೇ | ನ್ | ■ | ಲ | ■ |
| ರಿ | ■ | 18 ಸ | ನ್ | ಸ್ಕ್ರೀ | ನ್ | ಸ | ಪ್ಲೈ |

ಹಗಲೇ ಎಲ್ಲ, ರಾತ್ರಿ ಇಲ್ಲ

# ದಿನ ಪೂರ್ತಿ ಹಗಲೇ

**● ಸಹನಾ ಪ್ರಸಾದ್**

ಏನ್ರೀ, ಹೇಳಿದ ಕೆಲಸ ಎಲ್ಲಾ ಮುಗೀತಾ? ಗುರ್ ಎಂದು ಬಾಸ್ ಪಕ್ಕದ ಸೀಟಿನ 0ಯಂಕ್ಟ0ಯ್ಯನನ್ನು ಉದ್ದೇಶಿಸಿ ಕೇಳಿದ್ದು,

ಆವ0ಯ್ಯ ನನ್ನತ್ತ ತಿರುಗಿ ಆಯ್ತೇನಮ್ಮ ಎಂದು ಹುಸಿ ನಗು ನಕ್ಕಿದ್ದು, ನನಗೆ ನಖಶಿಖಾಂತ ಉರಿದು ಹೋಗಿದ್ದು ಒಟ್ಟಗೆ ನಡೆಯಿತು. ಕಾರಣ ಇಷ್ಟೇ, ನನ್ನ ಬಾಸ್ ಸಿನೇಮಾದಲ್ಲಿ ತೋರಿಸುವಂತೆ ಚೆಲುವ ಚೆನ್ನಿಗರಾ0ಯನಲ್ಲ. ಒಂದು ದೊಡ್ಡ ಕಪ್ಪೆಗೆ ಪ್ಯಾಂಟು, ಶರಟು ಹಾಕಿದ ಹಾಗಿದ್ದು, ನಾ ಪ್ರೀತಿಸಿ ಒಬ್ಬ ಚೆಲುವ, ಶ್ರೀಮಂತ 0ಯುವಕನನ್ನು ಮದುವೆ ಆಗಬೇಕೆಂದು ಪಟ್ಟಿದ್ದ ಕನಸುಗಳೆಲ್ಲಾ ನುಚ್ಚುನೂರಾಗಿದ್ದು, ಇನ್ನೊಂದು ನನ್ನ ಕೆಲಸದ ಮೇಲ್ವಿಚಾರಕ 0ಯಂಕ್ಟ0ಯ್ಯ ಒಳ್ಳೆ ಗುಳ್ಳೆನರಿ0ಯ ಹಾಗಿರುವುದು. ಇರಲಿ, ನನ್ನ ದು:ಖದಾ0ಯಕ ಕತೆ ಈಗ ಬೇಡ.

ಸುಮಾರಾಗಿ ಆಗಿದೆ, ಮನೆಗೆ ಹೋಗುವ ಮುನ್ನ ಮುಗಿಸುವೆ ಎಂದ ತಕ್ಷಣ ನಾಲಿಗೆ ಕಚ್ಚಿಕೊಂಡೆ. ಯಾಕೆಂದರೆ ಈಗ ನಮಗೆ ದಿನಗಳು ಪೂರ್ತಿ ಹಗಲು ಇರುವಂತಹುದು.

ನಮ್ಮ ಊರಿನಲ್ಲಿ 15 ದಿನ ಸಂಪೂರ್ಣ ಹಗಲು, ಮಿಕ್ಕ ದಿನ ಸಂಪೂರ್ಣ ಕತ್ತಲು. ಕತ್ತಲಿದ್ದಾಗ ಮನೆ0ಯಲ್ಲಿರುವ ನಾವು ಹಗಲಿದ್ದಾಗ ಯಾವಾಗಲೂ ಕೆಲಸ ಮಾಡುತ್ತಾ ಇರುತ್ತೀವಿ. ಸುಮಾರು 12 ತಾಸು ಕಳೆದ ಮೇಲೆ ಮನೆಗೆ ಹೋಗಿ ಸ್ನಾನ, ಬ್ರಶ್ಷು ಇತ್ಯಾದಿ ಮುಗಿಸಿ ಮನೆ0ಯಲ್ಲಿರುವ ಹೆಂಡತಿ/ಗಂಡ/ ಅತ್ತೆ/ಮಾವ/ ಅಪ್ಪ/ಅಮ್ಮ ಮುಂತಾದವರೆಗೆ ಮುಖ ತೋರಿಸಿ ಬರುವುದು. ಕೆಲಸಕ್ಕೆ ಹೋಗದವರು, ಟೀವಿ0ಯಲ್ಲಿ ಬರುವ ಬೇರೆ ತರಹದ ಶೊ ನೋಡಿ ಸ್ವಲ್ಪ ತೂಕಡಿಸುವುದು. ಮೊದಲ 12 ತಾಸು ದೇವರನಾಮಗಳು, ಭಜನೆ, ಭವಿಷ್ಯ, ಅಡುಗೆ ಮನೆ, ಇತ್ಯಾದಿ ಶೋಗಳು. ಮುಂದಿನ 12 ತಾಸು ಅತ್ತೆ ಸೊಸೆ ಜಗಳ, ಓರಗಿತ್ತಿ0ಯರ ಪೈಪೋಟಿ, ಗಂಡ ಹೆಂಡಿರ ನಡುವೆ ಮೋಸ, ದಗಾ ಇತ್ಯಾದಿಗಳನ್ನು ಹೊತ್ತ ಶೋಗಳು. ಎರಡನೇ ಸುತ್ತಿನಲ್ಲಿ ಬರುವ ಈ ರೀತಿ0ಯ ಶೋಗಳಿಗೆ ಎಲ್ಲರೂ ಕಾತರದಿಂದ ಕಾ0ಯುತ್ತಾರೆ. ಮನೆ ಕೆಲಸ ಮುಗಿಸಿ ಒಂದು ಸುತ್ತು ಶಾಪಿಂಗ್ ಮುಗಿಸಿ, ಹರಟೆ ಕೊಚ್ಚಲು ಇದು ಸೂಕ್ತ ಸಮ0ಯ, ಎಲ್ಲಾ ಅಂಗಡಿಗಳಲ್ಲೂ ಭಾರಿ ರಿಯಾ0ಯತಿ ನೀಡುತ್ತಾರೆ. ಅದರ ಸದುಪಯೋಗ ಪಡೆದುಕೊಳ್ಳಲು ಕೆಲಸಕ್ಕೆ ಹೋಗದವರೆಲ್ಲಾ ಆಸಕ್ತಿಯಿಂದ ಕಾ0ಯುತ್ತಿರುತ್ತಾರೆ, ಇನ್ನು ಹದಿಹರೆ0ಯದವರಿಗೆ ಇದು ಸುಗ್ಗಿ. ಕತ್ತಲಾಗುವ ಮುನ್ನ ಮನೆ ಸೇರಿಕೊ ಎನ್ನಲು ದೊಡ್ಡವರಿಗೆ ಆಗುವುದಿಲ್ಲ. 24 ತಾಸೂ ಮಾಲು, ಸಿನೇಮ ಎಂದು ಸುತ್ತಬಹುದು, ಒಂದೇ ಕೊರತೆ ಎಂದರೆ ಕತ್ತಲ ಮರೆ0ಯಲ್ಲಿ ಇನಿ0ಯನೊಡನೆ ಮುತ್ತು, ಅಪ್ಪುಗೆ ಕೊಟ್ಟು, ಪಡೆ0ಯಲಾಗುವುದಿಲ್ಲ.

ಇನ್ನು ಕೆಲಸಕ್ಕೆ ಹೋಗುವರಿಗೆ ಇದು ಬಹಳ ಕಷ್ಟ ಕಾಲ. ಬಾಸ್ಗಳಿಗೆ ಸುಗ್ಗಿ, 2 ಗಂಟೆ ಮನೆಗೆ ಹೋಗುವುದು ಬಿಟ್ಟರೆ 22 ತಾಸು ಕೆಲಸ ಕೀಳಬಹುದು. ಸಿಡಿ ಸಿಡಿ ಅನ್ನುತ್ತಲೇ ಇರಬಹುದು. ಮನೆ0ಯಲ್ಲಿ ಹೆಂಡತಿಯಿಂದ ತಪ್ಪಿಸಿಕೊಳ್ಳುವ ಗಂಡಸರು ಇಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೆ. ಹೆಣ್ಣು ಮಕ್ಕಳಿಗೆ ಸ್ವಲ್ಪ ಕಷ್ಟ. ಗಂಡ ಕೈಗೆ ಸಿಗದಿರುವುದರಿಂದ ಸಿಕ್ಕ ಸಿಕ್ಕವರ ಹತ್ತಿರ ತಮ್ಮ ಅಸಹನೆ ತೋರಿಸಲು ಸಾಧ್ಯವಿಲ್ಲದರಿಂದ ಎದೆ ಸ್ವಲ್ಪ ಭಾರವೇ.

ಅಲ್ಲಾ, ನಿದ್ದೆ ಯಾವಾಗ್ ಮಾಡುವಿರಿ ಎಂದಿರಾ? ನಮಗೆ 15 ದಿನ ನಿದ್ದೆಯೇ ಇಲ್ಲ. ಮಿಕ್ಕ ದಿನ ಬರೀ ಅದೇ. ಆದರೆ ನಿಮ್ಮಲ್ಲಿ0ಯಂತೆಯೇ ಕೆಲವರು ಕದ್ದು ಮುಚ್ಚಿ ತೂಕಡಿಸುವುದೂ ಉಂಟು. ವಿರಹಿಗಳು, ದುಡ್ಡಿನ ಚಿಂತೆ ಹೊತ್ತವರು ರಾತ್ರಿ0ಯ ದಿನಗಳಲ್ಲಿ0ಯೂ ನಿದ್ದೆಗೆಡುವರು! ■

ಹಗಲೇ ಎಲ್ಲ, ರಾತ್ರಿ ಇಲ್ಲ

# ಇದು ಬರಿ ಬೆಳಗಲ್ಲೋ ಅಣ್ಣ

**- ಈಶ್ವರ ಚಂದ್ರ**

ಅಬ್ಬಬ್ಬಾ! ಎಲ್ಲೆಲ್ಲೂ ಬೆಳಕೇ ಬೆಳಕು, ಕತ್ತಲೆಯ ಸುಳಿವೇ ಇಲ್ಲ. ಯಾವಾಗಲೂ ಬೆಳಕೇ. ಈಗ ಗೋಳದ ಒಂದು ಅರ್ಧದಲ್ಲಿ ಬೆಳಕಿದ್ದರೆ ಇನ್ನೊಂದು ಅರ್ಧದಲ್ಲಿ ಕತ್ತಲೆ ಆದರೆ ಹೊಸ ಪರಿಸ್ಥಿತಿಯಲ್ಲಿ ಎಲ್ಲೆಲ್ಲೂ ಬೆಳಕೇ ಇರಬೇಕೆಂದರೆ, ಇಪ್ಪತ್ತನಾಲ್ಕು ಗಂಟೆಯೂ ಬೆಳಕೇ ಇರಬೇಕೆಂದರೆ, ಇಬ್ಬರು ಸೂರ್ಯರು ಬೇಕು. ಅವರು ಸದಾ ನೆತ್ತಿಯ ಮೇಲೆ ಉರಿಯುತ್ತಿರಬೇಕು. ಹಾಗಾದರೆ ಸೂರ್ಯೋದಯ ಸೂರ್ಯಾಸ್ತಗಳಿಲ್ಲ. ಮೂಡಲ ಮನೆಯ ಮುತ್ತಿನ ನೀರಿನ ಎರಕಾವ ಹೊಯ್ದು ಎಂಬ ಬೇಂದ್ರೆಯವರ ಗೀತೆ ಅರ್ಥ ಕಳೆದುಕೊಳ್ಳುತ್ತದೆ. ಸೂರ್ಯೋದಯ ಚಂದ್ರೋದಯ ದೇವರ ಕೃಪೆ ಕಾಣೋ ಎಂಬ ಕುವೆಂಪು ಅವರ ಕವಿತೆಯೂ ಅರ್ಥವಾಗುವುದಿಲ್ಲ. ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಾಲಿ ಎಂದು ಇನ್ನು ಹಾಡುವಂತಿಲ್ಲ. ಕವಿಗಳ ಜೊತೆಗೆ ಚಿತ್ರಕಾರರು ನಿರುದ್ಯೋಗಿಗಳಾಗುತ್ತಾರೆ. ಛಾಯಾಚಿತ್ರಕಾರರು ಮತ್ತು ಚಲನಚಿತ್ರ ನಿರ್ದೇಶಕರೂ ಗೊಂದಲದಲ್ಲಿ ಬೀಳುತ್ತಾರೆ.

ಯಾವಾಗಲೂ ಉರಿಬಿಸಿಲು ಜಡಿಯುತ್ತಿದ್ದರೆ ಕೂಲಿಂಗ್ ಗ್ಲಾಸ್‌ಗಳಿಗೆ ಮತ್ತು ಕೊಡೆಗಳಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು. ಚಳಿ ಎನ್ನುವುದು ಇರುವುದಿಲ್ಲ. ಸ್ವೆಟರ್, ಮಫ್ಲರ್, ಟೋಪಿಗಳಿಗೆ ಬೇಡಿಕೆಯಿಲ್ಲ. ಈಗ ಕಾಲವನ್ನು ಲೆಕ್ಕಹಾಕುವುದೂ ಕಷ್ಟವಾಗುತ್ತದೆ. ದಿನಕ್ಕೆ ಪ್ರಾರಂಭವೂ ಇಲ್ಲ, ಮುಕ್ತಾಯವೂ ಇಲ್ಲ. ಶಾಲೆಯ ಬೆಲ್ಲು ಯಾವಾಗ ಹೊಡೆಯಬೇಕು? ಕಚೇರಿಗಳು ಯಾವಾಗ ಪ್ರಾರಂಭವಾಗಬೇಕು? ಯಾವಾಗ ಮುಕ್ತಾಯವಾಗಬೇಕು? ಬೇಸಿಗೆ ರಜವನ್ನು ಕೊಡುವುದು ಯಾವಾಗ? ಮಕ್ಕಳು ಬೆಳಗಿನ ಝಾವ ಎದ್ದು ಓದುವ ಪ್ರಶ್ನೆಯೇ ಇಲ್ಲ. ಮಲಗುವುದು ಯಾವಾಗ? ಕಿಟಕಿ ಬಾಗಿಲುಗಳಿಗೆ ದಪ್ಪ ಪರದೆಯನ್ನು ಹಾಕಿ ಕತ್ತಲು ಮಾಡಿಕೊಂಡು ಮಲಗಬೇಕು. ಯಾವಾಗಲೂ ಬೆಳಕೇ ಇರುವುದರಿಂದ ಕುಟುಂಬ ಯೋಜನೆ ಕಾರ್ಯಕ್ರಮ ಇನ್ನೂ ಹೆಚ್ಚು ಯಶಸ್ವಿಯಾಗಬಹುದು. ಫ್ಯಾನುಗಳಿಗೆ, ಎ.ಸಿ.ಗಳಿಗೆ ಮತ್ತು ಕಿಟಕಿಗಾಜುಗಳಿಗೆ ಅಂಟಿಸುವ ಕೂಲಿಂಗ್ ಫಿಲ್ಮ್‌ಗಳಿಗೆ ಬೇಡಿಕೆ ಜಾಸ್ತಿಯಾಗುತ್ತದೆ.

ಯಾವಾಗಲೂ ಸೂರ್ಯನೇ ಇದ್ದರೆ ಚಂದ್ರನಿಗೆ ಅವಕಾಶವೆಲ್ಲಿ? ಚಂದ್ರ ಕಾಣಿಸುವುದಿಲ್ಲ. ಚಂದ್ರೋದಯವೂ ಇಲ್ಲ. ಸಂಕಷ್ಟಿ ಮತ್ತು ಈದ್-ಮಿಲಾದ್ ಆಚರಿಸುವವರಿಗೆ ಸಂಕಷ್ಟ. ಯುಗಾದಿ ಚಂದ್ರದರ್ಶನಕ್ಕೂ ಅವಕಾಶವಿಲ್ಲ. ಚೌತಿ ಚಂದ್ರನನ್ನು ನೋಡಿ ಮಿಥ್ಯಾಪವಾದಕ್ಕೆ ಗುರಿಯಾಗುವ ಸಾಧ್ಯತೆ ಇಲ್ಲ. ಚಂದ್ರನಿಲ್ಲದ ಮೇಲೆ ಚಂದ್ರಯಾನದ ಸಾಹಸವೂ ಇಲ್ಲ. ಚಂದ್ರವದನೆ, ಇಂದುಮುಖಿ, ಶಶಿವದನೆ, ಶಶಿಧರ, ಚಂದ್ರಮೌಳಿ, ಚಂದ್ರಶೇಖರ ಮುಂತಾದ ಹೆಸರುಗಳು ಅರ್ಥ ಕಳೆದುಕೊಳ್ಳುತ್ತವೆ. ಈಶ್ವರನ ಜಟೆಯಿಂದ ಚಂದ್ರ ಮಾಯ. ಚೋರ ನಿಂದಿಸಿ ಶಶಿಯ ಹಳಿದೆಡೆ ಎಂಬ ಕುಮಾರವ್ಯಾಸನ ಪದ್ಯ ಅರ್ಥಶೂನ್ಯ. ರಾತ್ರಿ ಕನ್ನಹಾಕುವ ಕಳ್ಳರಿಗೆ ನಿರುದ್ಯೋಗ ಪೊಲೀಸರಿಗೂ ಕೆಲಸ ಕಡಮೆ.

ಕಳ್ಳರು ಹಗಲುಹೊತ್ತಿನ ಕಳ್ಳತನದ ಹೊಸ ವಿಧಾನಗಳನ್ನು ಕಂಡುಕೊಳ್ಳಬಹುದು. ಪೊಲೀಸರಿಗೆ ಹೊಸ ತಲೆಬೇನೆ. ಚಂದಕ್ಕಿ ಮಾಮ ಚಕ್ಕುಲಿ ಮಾಮ ಎಂದು ಹೇಳುತ್ತಾ ಮಕ್ಕಳಿಗೆ ಊಟ ಮಾಡಿಸುತ್ತಿದ್ದ ತಾಯಂದಿರಿಗೆ ಗೊಂದಲ. ರಾಮ, ಚಂದ್ರನನ್ನು ಬೇಡಿದ್ದನಂತೆ ಮಗುವಾಗಿದ್ದಾಗ ಈಗ ಅದೆಲ್ಲ ಕಥೆ. ಚಂದ್ರನೇ ಇಲ್ಲದ ಮೇಲೆ ಹನಿಮೂನ್ ಶಬ್ದಕ್ಕೆ ಅರ್ಥವೇ ಇಲ್ಲ. ಹುಣ್ಣಿಮೆ ಅಮಾವಾಸ್ಯೆಗಳಲ್ಲಿ ಜೇನುಗೂಡುಗಳಿಂದ ಜೇನುತುಪ್ಪ ಕುಡಿಯುತ್ತಿದ್ದ ಜೇನುಹುಳುಗಳಿಗೆ ಗೊಂದಲವಾಗಿ ಯಾವಾಗಯಾವಾಗಲೋ ಕುಡಿದು ಮಾರುಕಟ್ಟೆಯಲ್ಲಿ ಜೇನುತುಪ್ಪಕ್ಕೆ ಅಭಾವ ತಲೆದೋರುತ್ತದೆ. ಚಂದ್ರನಿಲ್ಲದೆ ನೈದಿಲೆಗಳು ಅರಳುವುದಿಲ್ಲ. ಕಮಲಗಳಾದರೋ ಸದಾ ಅರಳಿಕೊಂಡೇ ಇರಬೇಕು. ರಾತ್ರಿ ಹೊರಗೆ ಬರುತ್ತಿದ್ದ ಗೂಬೆಗಳು ಮತ್ತು ಬಾವಲಿಗಳಿಗೆ ಉಪವಾಸ. ಇಲಿ ಮತ್ತು ಹೆಗ್ಗಣ ಬಿಲದಿಂದ ಯಾವಾಗ ಹೊರಗೆ ಬರಬೇಕು?

ಚಂದ್ರನಿಲ್ಲದಿರುವುದರಿಂದ ನಕ್ಷತ್ರಗಳೂ ಕಾಣಿಸುವುದಿಲ್ಲ. ಗ್ರಹಗಳೂ ಇಲ್ಲ. ಅಂದಮೇಲೆ ರಾಶಿಗಳೆಲ್ಲಿ? ಜ್ಯೋತಿಷಿಗಳಿಗೆ ನಿರುದ್ಯೋಗ. ಅರ್ಧಚಂದ್ರ ಪಾಕಿಸ್ತಾನದ ಧ್ವಜದಲ್ಲಿ ಮಾತ್ರ ಉಳಿದುಕೊಳ್ಳುತ್ತದೆ. ಅರ್ಧಚಂದ್ರ ಪ್ರಯೋಗ ಎಂಬ ನುಡಿಗಟ್ಟು ನಿಘಂಟಿನಲ್ಲಿ ಮಾತ್ರ ಉಳಿಯುತ್ತದೆ. ಪತ್ತೇದಾರಿ ಕಾದಂಬರಿಕಾರರಿಗೆ ಕಷ್ಟ. ಅಮಾವಾಸ್ಯೆಯ ಕಾರಿರುಳು, ಸ್ಮಶಾನದಲ್ಲಿ ಒಬ್ಬ ವ್ಯಕ್ತಿ ಹೆಜ್ಜೆ ಇಡುತ್ತಿದ್ದಾನೆ... ಇತ್ಯಾದಿ ವರ್ಣನೆಗಳು ಮಾಯವಾಗುತ್ತವೆ.

ದೆವ್ವಗಳಿಗೆ (ಅವು ಇದ್ದರೆ) ದೊಡ್ಡ ಸಮಸ್ಯೆ. ಮಾಟಗಾರರನ್ನು ಈಗ ಕೇಳುವವರೇ ಇಲ್ಲ. ನಡುರಾತ್ರಿ ಮಾಡುವ ವಾಮಾಚಾರಗಳೆಲ್ಲ ಬಂದ್.

ರಾತ್ರಿ ಅಥವಾ ಬೆಳಗಿನ ಝಾವದಲ್ಲಿ ನಡೆಯುತ್ತಿದ್ದ ರಸ್ತೆ ಅಪಘಾತಗಳು ಕಡಮೆಯಾಗುತ್ತವೆ. ಇದರಿಂದ ಜನಸಂಖ್ಯೆ ಹೆಚ್ಚಾಗುವ ಅಪಾಯ. ಕಾಳಸಂತೆ, ಕಾಳಧನ ಮುಂತಾದ ಪದಗಳು ಕಣ್ಮರೆಯಾಗುತ್ತವೆ.

ಬೆಳಗಾಗುತ್ತಿದ್ದಂತೆಯೇ ಗೂಡಿನಿಂದ ಹಾರಿ ಹೋಗಿ ಸಂಜೆ ಮತ್ತೆ ಗೂಡಿಗೆ ಮರಳುತ್ತಿದ್ದ ಹಕ್ಕಿಗಳಿಗೆ ಈಗ ಗೊಂದಲ. ಯಾವಾಗಲೂ ಬಿಸಿಲು ಸುರಿಯುತ್ತಿದ್ದರೆ ಸಮುದ್ರದ ನೀರು ಕಾದುಕಾದು ಆವಿಯಾಗಿ ಮೋಡವಾಗಿ ಪ್ರಚಂಡ ಮಳೆ ಬರಬಹುದು. ಜಲ ಪ್ರವಾಹ, ಜಲ ಪ್ರಳಯ, ಋತುಗಳು ಗೊಂದಲಕ್ಕೆ ಬೀಳುತ್ತವೆ. ಚಳಿಗಾಲ ಇರುವುದಿಲ್ಲ. ಉತ್ತರ-ದಕ್ಷಿಣ ಧ್ರುವಗಳಲ್ಲಿ ಹಿಮಕರಗಿ ಸಮುದ್ರದ ಮಟ್ಟ ಹೆಚ್ಚಾಗುತ್ತದೆ. ಮುಂಬಯಿ, ಅಂಡಮಾನ್, ಜಪಾನ್ ಸಮುದ್ರದಲ್ಲಿ ಮುಳುಗುತ್ತವೆ. ಹಿಮಾಲಯ ಕರಗಿ ಗಂಗಾ ಯಮುನಾ ನದಿಗಳಲ್ಲಿ ಪ್ರವಾಹ. ತೀರದ ಪಟ್ಟಣಗಳ ಮುಳುಗಡೆ.

ಅಬ್ಬಬ್ಬಾ! ಇಷ್ಟೆಲ್ಲಾ ಆಗುವಂತಿದ್ದರೆ ಯಾವಾಗಲೂ ಬೆಳಕು ನಮಗೆ ಬೇಡ. ಅರ್ಧ ಬೆಳಕು ಅರ್ಧ ಕತ್ತಲು ದೇವರ ಸೃಷ್ಟಿ. ನಮಗೆ ಅದೇ ಬೇಕು. ಚಂದ್ರ ಬೇಕು, ಬೆಳದಿಂಗಳು ಬೇಕು, ನಕ್ಷತ್ರ - ಗ್ರಹಗಳು ಬೇಕು. ಕತ್ತಲೆಯ ಹಿತಬೇಕು. ಗಡದ್ದಾಗಿ ಎಂಟು ಗಂಟೆ ನಿದ್ದೆಬೇಕು. ಕನಸು ಬೇಕು.

■

# ನೊ ಕವರ್ ಆಫ್ ಡಾರ್ಕ್‌ನೆಸ್

● ಡಾ. ಶ್ಯಾಮಲ್ ರವಿಶಂಕರ್

ದಿನವೆಲ್ಲಾ ಹಗಲೇ ಆಗಿದ್ರೆ ಹೇಗಿರಬಹುದೂಂತ ಒಂದು ಕನಸು ಕಾಣುತ್ತಿದ್ದೆ ಮೊನ್ನೆ ಬೆಳಗಿನ ಕಾಫಿ ಕೈಲಿಹಿಡ್ಕೊಂಡು. ತಾಮಸಪ್ರವೃತ್ತಿಯ ನನಗೆ ಬಂದ ಮೊದಲ ಯೋಚನೆ ರಾತ್ರಿ ನಿದ್ದೆಗೆ ದೊಡ್ಡ ಸೊನ್ನೆ ಅನ್ನೋ ಆತಂಕ. ಯೋಚನಾ ಲಹರಿ ಹರಿಯಲು ಬಿಟ್ಟೆ..

ಎಲ್ಲಿ ನೋಡಿದ್ರು ಬೆಳಕೆ ಬೆಳಕು. ಜನ ಓಡಾಡಿದ್ದೇ ಓಡಾಡಿದ್ದು. ಕೆಲಸ ಕಾರ್ಯ ಅಂತ ಯಾರಿಗೂ ಮಾತಾಡೋದಿರಲಿ, ಹಲೋ ಅನ್ನೋಕ್ಕೂ ವ್ಯವದಾನವಿಲ್ಲ! ಎಲ್ಲರಿಗೂ ಯಾವಾಗ್ಲೂ ಗಡಿಬಿಡಿ. ಓಹೋ, ನಮ್ಮ ದೇಶಕ್ಕೆ ಬೇಕಾಗಿದ್ದಿದ್ದೆ ಇದು. ಹೆಚ್ಚು ಹೆಚ್ಚು ಉತ್ಪಾದನೆ. ಎಲ್ಲರೂ ಕಾರ್ಯ ನಿರತರಾಗಿರ್ತಾರೆ ಅನ್ನಿಸ್ತು. ಮರು ಕ್ಷಣ ಹೀಗೆ ಎಷ್ಟು ದಿನ ನಡೆಯತ್ತೆ. ಮನುಷ್ಯನ ಸಿಸ್ಟಮ್ ಖಂಡಿತ ಬ್ರೇಕ್ ಡೌನ್ ಆಗತ್ತೆ. ಇದು ವೃತ್ತಿ ಜೀವನದಲ್ಲಾದರೆ ವೈಯಕ್ತಿಕವಾಗಿ? ಯಾರೋ ನಾಡಿದ್ದು ನಮ್ಮ ಮನೆಗೆ ಊಟಕ್ಕೆ ಬನ್ನಿ ಅಂತ ಹೇಳಿದ್ರೆ ನಾಳೆನೋ ಅಥ್ವಾ ಆಚೆ ನಾಳಿದ್ದೋ ಅವರ ಮನೆಗೆ ಹೋಗಿ ವಕ್ಕರಿಸುವ ಸಂಭವಾನೇ ಜಾಸ್ತಿ. ಯಾಕೆಂದ್ರೆ ಈಗ ಹನ್ನೊಂದು ಘಂಟೆಗೆ ಬನ್ನಿ ಅಂದ್ರೆ 11 ಎಎಮ್ಮೊ 11 ಪಿಎಮ್ಮೊ ಅನ್ನೋದೇ ಗೊತ್ತಾಗ್ದೇ ಹೋದ್ರೆ ಇವತ್ತೋ ನಾಳೆನೋ ಅಂತ ಹೇಗೆ ಗೊತ್ತಾಗುತ್ತೆ, ಬಿಡಿ. ದಿನ ಎಣಿಸೋದೆ ಇಷ್ಟು ಕಷ್ಟ ಆದ್ರೆ ವಾರ, ಪಕ್ಷ, ತಿಂಗಳು ಇತ್ಯಾದಿ ಇತ್ಯಾದಿ ತಿಳಿಯೋದು ಸಾಧ್ಯನಾ? ಇನ್ನು ಕಳ್ಳರ ಪಾಡೇನು? ನೋ ಕವರ್ ಆಫ್ ಡಾರ್ಕ್ನೆಸ್. ಹೊಟ್ಟೆ ತುಂಬಿಸ್ಕೋಬೇಕಾದ್ರೆ ಹಗಲು ಕಳ್ಳತನ ಸ್ಪೆಶಲೈಸ್ ಮಾಡ್ಕೊಬೇಕು. ಇರಲಿ. ಎಲ್ಲರ ವೃತ್ತಿಲೂ ಏನಾದ್ರೂ ಕಷ್ಟ ಕಾರ್ಪಣ್ಯ ಇರೋದೆ. ಅಡ್ಜಸ್ಟ್ ಆಗಬೇಕು ಸರ್ವೈವಲ್ ಆಫ್ ದಿ ಫಿಟೆಸ್ಟ್,

ಜೀವ ಶಾಸ್ತ್ರ ಓದಿದ ಅಭ್ಯಾಸ, ಬುದ್ಧಿ ಆ ಕಡೆಗೆ ಓಡತ್ತೆ. ಗಿಡಗಳ ಕಷ್ಟ ನೋಡಿ ಮತ್ತೆ. ಯಾವಾಗ್ಲೂ ಫೋಟೋ ಸಿಂತೆಸಿಸ್ ಅರ್ಧಂಭರ್ಧ ಮಾಡ್ತಿರಬೇಕು. ಕತ್ತಲೆಲಿ ಆಗೋ ರಿಯಾಕ್ಷನ್ನಗಳನ್ನೆಲ್ಲ ವಜಾ ಮಾಡ್ಕೊಂಡು ಫ್ಲೋರಿಜೇನ್ ಅಲ್ಪ ಸ್ವಲ್ಪ ತಯಾರಾಗಿ ಒಂದಷ್ಟು ಹೂವು ಬಿಟ್ಟ ಮೇಲೆ ಖತಂ. ಹೂವು ಬಿಡೋ ಕೆಲಸ ಇರೋಲ್ಲ ಸೊ ಹಣ್ಣಿನ ಮಾತೇ ಇಲ್ಲ, ಎಷ್ಟೆಷ್ಟೋ ಲೆಕ್ಕವಿಲ್ಲದಷ್ಟು ಚೈನ್ ರಿಯಾಕ್ಷನ್‌ಗಳು ನಿಂತು ಹೋಗುತ್ತವೆ. ಇದು ಎಲ್ಲ ಜೀವರಾಶಿಗಳಿಗೂ ಅನ್ವಯಿಸುವುದೇ, ಸೊ ನಮಗೆ, ಏಕಾದಶಿ. ಶಿವರಾತ್ರಿಗಳಲ್ಲಿ ಇಂಟರೆಸ್ಟು ಹೊರಟು ಹೋಗತ್ತೆ. ಒಳ್ಳೊಳ್ಳೆ ಫಳಾರಕ್ಕೆ ದೊಡ್ಡ ಸೊನ್ನೆ.

ಇನ್ನೂ ಪ್ರಾಣಿಗಳ ಗತಿ? ಸೂರ್ಯೋದಯದಲ್ಲಿ ಚಿಲಿಪಿಲಿ ಅಂತ ಖುಷಿಯಾಗಿ ಹಾಡಿಕೊಂಡು ಹೋಗಿ ಮುಸ್ಸಂಜೆಗೆ ವಾಪಸ್ ಬರೋಕೆ ಸಂಜೆ ಮುಸ್ಸಂಜೆ ಎಲ್ಲ ಎಲ್ಲಿ? ಅವಾಕ್ಕಾಗಿ ಎದುರು ನೋಡುತ್ತಿರುವ ಪುಟ್ಟ ಮರಿಗಳ ಗತಿಯೇನು.

ರಾತ್ರಿ ಸಂಚಾರಿ ಪ್ರಾಣಿಗಳಿಗೆ ಆಹಾರ? ಬೆಳಗ್ಗೆ ತೂಕಡಿಸುವ ಗೂಬೆ ಏನೋ ಸಕ್ಕತ್ತಾಗಿ ತೂಕಡಿಸಬಹುದು. ಆದರೆ ಅದರ ಬುದ್ಧಿವಂತಿಕೆ ಪ್ರದರ್ಶಿಸೋಕೆ ರಾತ್ರೀನೇ ಮುಹೂರ್ತವಂತೆ. ಏನೋ ಪೆದ್ದಾಗೇ ಇರಬಹುದು. ಆದ್ರೂ ಅದ್ಕೂ ಅಹಂ ಇರಲ್ವೆ?

ಈ ಪ್ರಶ್ನೆಗಳಿಗೆ ಕೊನೆ ಎಲ್ಲಿವೇ? ಇವಕ್ಕೆ ಪರಿಹಾರವೆಲ್ಲಿ? ನನ್ನ ತಲೆ ತುಂಬಾ ಬಿಸಿ ಆಗಿಹೋಯಿತು. ಕೈಲಿದ್ದ ಕಾಫಿ ತುಳುಕಿ ಚೆಲ್ಲಿ ಕಾಲ ಮೇಲೆ ಬಿದ್ದು ಚುರುಗುಟ್ಟಿದ್ದಾಗ ವಾಸ್ತವಕ್ಕೆ ಎಚ್ಚೆತ್ತ ನಾನು, ''ಉಶ್ಶಪ್ಪ ಸದ್ಯ, ಇದು ಹಗಲುಗನಸು ಅಷ್ಟೇ ತಾನೇ'' ಅನ್ನಿಸಿದಾಗ ನನ್ನ ಖುಷಿ ನೀವೇ ಊಹಿಸಿ! ■

ಹಗಲೇ ಎಲ್ಲ, ರಾತ್ರಿ ಇಲ್ಲ

# ಇರುಳುಗನಸು, ಹಗಲುಗನಸಲ್ಲ!

● **ಕೃಷ್ಣ ಸುಬ್ಬರಾವ್**

ಎಂತಹ ಅದ್ಭುತ ಪರಿಕಲ್ಪನೆ. ನಾವೇನಾದ್ರೂ ಹಗಲುಗನಸು ಕಾಣುತ್ತಿಲ್ಲವಷ್ಟೆ? ಇರುಳು ಇಲ್ಲದಿರುವಾಗ ಹಗಲುಗನಸುಗಳಿಗೆ ಜಾಗವೆಲ್ಲಿ? ಅದು ಇದ್ದರೂ ಅದನ್ನು ಇರುಳುಗನಸು ಎಂದು ಕರೆಯಬೇಕಲ್ಲವೇ. ಪ್ರಕೃತಿಯ ವಿಕೃತಿಗಳನ್ನು ನೋಡುತ್ತಿರುವಾಗ ಅಲ್ಲೋಲ ಕಲ್ಲೋಲಗಳು ಬಹಳ ದೂರವಿಲ್ಲವೆನಿಸುತ್ತದೆ. ನಮ್ಮ ಬದುಕಿನಲ್ಲಿ ಏರುಪೇರು ಆಗುವುದರಲ್ಲಿ ಸಂಶಯವಿಲ್ಲ. ಬದಲಾವಣೆಗಳು ಹೀಗಿರಬಹುದೆ? ನಿದ್ದೆಗೆ ಹಗಲು ಇರುಳು ಭೇದವಿಲ್ಲವೆಂದು ಸಾರಿದ ಕುಂಭಕರ್ಣ ನನಗೆ ಎಂದಿಗೂ ಆದರ್ಶ. ಏನು ವ್ಯತ್ಯಾಸ ವಿಲ್ಲ. ಆದರೆ ಹುಲುಮಾನವನ ಬದುಕು ಹಾಗಲ್ಲ. ಅವನ ಬದುಕು ಹಾಗಿರಲಿ, ನನಗೆ ಪಿಶಾಚಿಗಳದೇ ಚಿಂತೆ. ಇರುಳು ಕಂಡ ಬಾವಿಗೆ ಈಗ ಪಿಶಾಚಿಗಳು ಬೀಳಬೇಕಾದ ಪರಿಸ್ಥಿತಿ ಬಂದಿದೆ. ಬೆಳಕಿನಲ್ಲಿ ಅವುಗಳಿಗೆ ಏನು ಕೆಲಸ.

ಭಯ ಹುಟ್ಟಿಸುವ ಭಕ್ತಿ, ಭಕ್ತಿಯಿಂದ ಸಲ್ಲಿಸುವ ಕಾಣಿಕೆಗಳ ಪ್ರಮಾಣ ಇಳಿಯಬಹುದು. ಹೋಮ, ಹವನಾದಿಗಳ ಮೂಲಕ ಉತ್ಪನ್ನವಾಗುವ ಹಣದ ವಹಿವಾಟು ಈಗಾಗಲೇ ಕುಸಿಯುತ್ತಿರುವ ಜಿ.ಡಿ.ಪಿಯನ್ನು ಮತ್ತಷ್ಟು ಪಾತಾಳಕ್ಕೆ ತಳ್ಳಬಹುದು. ದೇಶದ ಆರ್ಥಿಕ ಪರಿಸ್ಥಿತಿ ಬಿಗಡಾಯಿಸುತ್ತದೆ.

ಬೆಳಕಿನ ಬೇಡಿಕೆ ಗಣನೀಯವಾಗಿ ಕಮ್ಮಿಯಾಗಿ ವಿದ್ಯುತ್‌ಶಕ್ತಿ ನಿಗಮಕ್ಕೆ ಬರುತ್ತಿದ್ದ ದೂರುಗಳ ಸಂಖ್ಯೆ ಇಳಿಮುಖವಾಗಿ ದೂರವಾಣಿ ಇಲಾಖೆಯ ಆದಾಯ ಕುಸಿದು ಆರ್ಥಿಕ ಮುಗ್ಗಟ್ಟು ಇನ್ನೂ, ಹೆಚ್ಚಾಗಿ ಅಲ್ಲಿನ ನಿವೃತ್ತಿ ವಯಸ್ಸು ಮತ್ತೆ ಇಳಿಯಬಹುದು.

ನಿದ್ರೆ ಮಾತ್ರೆಗಳನ್ನು ತಯಾರಿಸುವ ಕಂಪನಿಗಳು ಬಾಗಿಲು ಹಾಕುವ ಸಮಯ ಹತ್ತಿರವಾಗಿದೆ. ಇನ್ಮುಂದೆ ಆತ್ಮಹತ್ಯೆ ಆಕಾಂಕ್ಷಿಗಳಿಗೆ ಮಾತ್ರ ನಿದ್ರೆ ಮಾತ್ರೆ ಎಂದಾದರೆ ಅದರ ರೇಟುಗಳನ್ನು ನೆನಪಿಸಿಕೊಂಡರೆ ಸಾವಿಗೆ ಬೇರೆ ಮಾರ್ಗಗಳನ್ನು ಹುಡುಕುವುದು ಅನಿವಾರ್ಯ.

ಜೀವನ ಜಂಜಾಟದಿಂದ ಬೇಸತ್ತು ಉಪವೃತ್ತಿ ಮಾಡಲು ಅನೇಕರು ಪ್ರತಿದಿನ ರಾತ್ರಿಪಾಳಿಯಲ್ಲಿ ದುಡಿದು, ಹಗಲಿನಲ್ಲಿ ಅಡುಗೆಯವರಾಗಿ ಕೆಲಸ ಮಾಡುತ್ತಾರೆ ಅಂಥವರು ಈಗ ಕಂಗಾಲಾಗಿದ್ದಾರೆ.

ಬದಲಾದ ವ್ಯವಸ್ಥೆಯಲ್ಲಿ ಅನೇಕ ಅನುಕೂಲಗಳೂ ಇವೆ. ನಮ್ಮನ್ನು ಆಗಾಗ್ಗೆ ಕಾಡುವ ಭಯಾನಕ ಯೋಚನೆಗಳಿಂದ ವಿಮುಕ್ತರಾಗಬಹುದೆಂದು ಆಸೆ ಕೆಲವರಿಗೆ ಕಾರಣ ಇನ್ನು ಮೇಲೆ ಕಾಡುವ ನೈಟ್ಮೇರ್‌ಗಳು ಇರುವುದಿಲ್ಲ ಎಂಬ ನಂಬಿಕೆ.

ನಿಶಾಚರರನ್ನು ಈಗ ಎಲ್ಲಿಂದ ಹುಡುಕುವುದು. ದೊಡ್ಡ ದೊಡ್ಡ ಕಳ್ಳರು ಭವಿಷ್ಯದಲ್ಲಿ ಕೇವಲ ಸರಗಳ್ಳರಾಗಿ ಉಳಿಯಬೇಕಾಗುತ್ತದೆ. ದರೋಡೆಕಾರರಿಗೆ ತೊಂದರೆ ಇಲ್ಲ. ಅವರಿಗೆ ಹಗಲಾದರೇನು ಇರುಳಾದರೇನು.


■

# ಅಪ್-ಟು-ಡೇಟ್ ಅಜ್ಜಿ ಮತ್ತು ಇತರೆ ಕಥೆಗಳು

ಲೇಖಕ : **ಇ.ಆರ್. ರಾಮಚಂದ್ರನ್**

ನ್ಯೂ ವೇವ್ ಬುಕ್ಸ್, ಬೆಂಗಳೂರು - 560004, ದೂರವಾಣಿ : 9448050463, 9448788222

ಬೆಲೆ ರೂ. 210, ಪುಟಗಳು 256




ಅಪರಂಜಿ ಬಳಗದವರೇ ಆದ ಇ.ಆರ್. ರಾಮಚಂದ್ರನ್ ಇದೀಗಷ್ಟೇ ತಮ್ಮ ಚೊಚ್ಚಲು ಕೃತಿಯನ್ನು ಹೊರ ತಂದಿದ್ದಾರೆ. ಇಆರ್‌ಆರ್ ಎಂದರೆ ಥಟ್ಟನೆ ನೆನಪಿಗೆ ಬರುವುದು ಅಜ್ಜಿ. ಅಜ್ಜಿ ಅಂದರೆ ಹಳೆಗಾಲದ ಹೂ ಬತ್ತಿ ಮಾಡುವ ಅಜ್ಜಿ ಅಲ್ಲ. ಈ ಅಜ್ಜಿ ಅಪ್-ಟು-ಡೇಟ್. ಲೇಖಕರೇ ವರ್ಣಿಸಿರುವಂತೆ ಈಕೆ ಒಂದು ಟು ಇನ್ ಒನ್ ಮಾಡಲ್. ಇಮೇಲ್, ಫೇಸ್ ಬುಕ್, ವಾಟ್ಸಪ್ ಹಾಗೂ ಹರಿಕಥೆ ಪಾರಾಯಣದಲ್ಲಿ ಪರಿಣಿತೆ. ತಾನು ಹೇಳಬೇಕಾದ್ದನ್ನು ಘಂಟಾಘೋಷವಾಗಿ ಹೇಳುವ ಡೋಂಟ್ ಕೇರ್ ಅಜ್ಜಿ . ಈ ಅಜ್ಜಿ ಕೆಲವಾರು ವರ್ಷಗಳಿಂದ ಪ್ರಪಂಚದ ಆಗುಹೋಗುಗಳ ಬಗ್ಗೆ ತನ್ನದೇ ಆದ ಶೈಲಿಯಲ್ಲಿ ವ್ಯಾಖ್ಯಾನಗಳಿಂದ ಅಪರಂಜಿ ಓದುಗರನ್ನು ರಂಜಿಸುತ್ತಾ, ಕೆಣಕುತ್ತಾ ಬಂದಿದ್ದಾರೆ. ಅಪೂರ್ವ ಖುಷಿ ನೀಡಿದ್ದಾರೆ. ಅಪರಂಜಿ ಓದುಗರಲ್ಲದೆ ಇತರ ಪತ್ರಿಕೆಗಳ ನೂರಾರು ಓದುಗರಿಗೆ ಇಆರ್‌ಆರ್ ತಮ್ಮ ಹಾಸ್ಯ ಬರಹಗಳ ಮೂಲಕ ಪರಿಚಿತರು. ಈಗ ಖುಷಿ ಕೊಡುವ ಸಂಗತಿ ಎಂದರೆ ಈ ಹಾಸ್ಯಬರಹಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಸದಭಿರುಚಿಯ ಹಾಸ್ಯಕ್ಕೆ ಈ ಸಂಗ್ರಹ ಒಂದು ಉತ್ತಮ ಉದಾಹರಣೆ. ಆಂಗ್ಲ ಸಾಹಿತ್ಯದ ಒಳಸುಳುಹುಗಳನ್ನು ತಮ್ಮ ಬರಹಗಳಲ್ಲಿ ಲೀಲಾಜಾಲವಾಗಿ ಬಳಸಿ ಎತ್ತಣದಿಂದತ್ತಣಕ್ಕೋ ಕೊಂಡಿ ಸೇರಿಸುವದರ ಮೂಲಕ ನಗೆಯ ಹೊಳೆಯನ್ನು ಹರಿಸುತ್ತಾರೆ. ಅಜ್ಜಿಯ ಒಳನೋಟಗಳ ಮೂಲಕ ಓದುಗರನ್ನು ಚಿಂತನೆಗೂ ಹಚ್ಚುತ್ತಾರೆ. ಈ ಸಂಗ್ರಹದ ಸ್ಪೆಷಾಲಿಟಿ ಎಂದರೆ ಇದನ್ನು ಮೊದಲಿನಿಂದಲೇ ಓದಬೇಕೆಂದಿಲ್ಲ, ಹಾಗೆ ಮಾಡಿದರೂ ಅಡ್ಡಿ ಇಲ್ಲ, ಯಾವುದೇ ಪುಟದಿಂದಾದರೂ ಪ್ರಾರಂಭಿಸಬಹುದು. ಬೇಜಾರಾದಾಗಲೆಲ್ಲಾ ಮನಸ್ಸು ಹಗುರ ಮಾಡಿಕೊಳ್ಳಲು ಇದನ್ನು ಓದಬಹುದು. ಅಂದ ಮೇಲೆ ನಿಮ್ಮ ಸಂಗ್ರಹದಲ್ಲಿ ಇರಲೇಬೇಕಲ್ಲವೆ? ■

---

## ನೈಟ್ ಬಸ್

ಬಸ್ ಹತ್ತುವಾಗ ಸುಸ್ವಾಗತ
ಬಸ್ ಚಲಿಸುವಾಗ ಸುಸು ಆಗತ
ಕತ್ತಲ ರಸ್ತೆ ಅಂಚಿನಲ್ಲಿ ಫಾಬರಿ
ಇನ್ಮೇಲಿಲ್ಲ ಈ ಕಿರಿಕಿರಿ!

## ಭಯ/ಭೀತಿ ಇಲ್ಲ

ದುಸ್ವಪ್ನಗಳ ಭಯವಿಲ್ಲ
ಕಳ್ಳಕಾಕರ ಭೀತಿಯಿಲ್ಲ
ದಿನವಿಡೀ ಹಗಲುಗನಸು
ಈಗ ನಿರಾಳವಾಗಿದೆ ಮನಸು!

**- ನಂನಾಗ್ರಾಜ್**

Published on 3rd of every month
Mailed on 5th of every month
Mailed at: Bangalore P.S.O. 560026

Registered - KA / BGW - 544 / 2018 - 2020
**RNI - KAR-KAN / 2005 / 15457**

Printed by: V.R. NATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55 Editor : M. SHIVAKUMAR
No. of Pages: 40+4 APARANJI KANNADA MONTHLY.